**ದಿನಾಂಕ: 19.05.2017ರ ಶುಕ್ರವಾರದಂದು ಅಪರಾಹ್ನ 3.30ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಸಿ.ದೇವಯ್ಯರವರ ಅಧ್ಯಕ್ಷತೆಯಲ್ಲಿ ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಾಧಿಕಾರದ ಮಾಸಿಕ ಸಾಮಾನ್ಯ ಸಭೆಯ ನಡಾವಳಿ.**

| ಕ್ರ.ಸ | ಹಾಜರಿದ್ದ ಸದಸ್ಯರು | ಕ್ರ.ಸ | ಗೈರು ಹಾಜರಿದ್ದ ಸದಸ್ಯರು |
|---|---|---|---|
| 1. | ಮಾನ್ಯ ಶ್ರೀ ಎ.ಸಿ. ದೇವಯ್ಯರವರು, ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | 1. | ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು, ಸದಸ್ಯರು<br>ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. |
| 2 | ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. | 2 | ಮಾನ್ಯ ಜಿಲ್ಲಾಧಿಕಾರಿಗಳು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 3 | ಮಾನ್ಯ ಶ್ರೀ ಸುನಿಲ್ ಸುಬ್ರಮಣಿರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | 3 | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 4 | ಮಾನ್ಯ ಶ್ರೀಮತಿ ವೀಣಾ ಅಚ್ಚಯ್ಯರವರು ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | 4 | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮೈಸೂರು |
| 5 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. | 5 | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| 6 | ಪೌರಾಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | | |
| 7 | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಲೋಕೋಪಯೋಗಿ ಇಲಾಖೆ, ಮಡಿಕೇರಿ. | | |
| 8 | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಚೆಸ್ಕಾಂ, ಮಡಿಕೇರಿ. | | |
| 9 | ಸಹಾಯಕ ನಿರ್ದೇಶಕರು, ನ.ಯೋ.ಸದಸ್ಯರು<br>ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿ | | |
| 10 | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮೈಸೂರು ವಿಭಾಗ, ಪುತ್ತೂರು | | |
| 11 | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ. | | |

| | | | |
|---|---|---|---|
| 12 | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು ಮಡಿಕೇರಿ ಉಪ ವಿಭಾಗ, ಮಡಿಕೇರಿ. | | |
| 13 | ಶ್ರೀ ಅಶೋಕ್ ಕುಮಾರ್ ಆಯುಕ್ತರು(ಪ್ರ), ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | | |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಸಿ.ದೇವಯ್ಯರವರು, ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಸುನಿಲ್ ಸುಬ್ರಮಣಿರವರು ಮತ್ತು ಮಾನ್ಯ ಶ್ರೀಮತಿ ವೀಣಾ ಅಚ್ಚಯ್ಯರವರುಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಎಲ್ಲಾ ಸದಸ್ಯರುಗಳು, ಆಹ್ವಾನಿತರುಗಳನ್ನು ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

**1) ವಿಷಯ ಸಂಖ್ಯೆ : 1**

ಹಿಂದಿನ ಸಭೆಯ ಅಂದರೆ ದಿನಾಂಕ:13.03.2017 ರಂದು ನಡೆದ ಪ್ರಾಧಿಕಾರದ ಆಯವ್ಯಯ ಮಂಡನಾ ಸಭಾ ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–** ಸದರಿ ಸಭೆಯ ನಡಾವಳಿಯನ್ನು ಓದಲಾಯಿತು ಹಾಗೂ ಸಭೆಯಲ್ಲಿ ಪ್ರಾಧಿಕಾರಕ್ಕೆ ಸ್ವಂತ ಕಚೇರಿ ಕಟ್ಟಡ ನಿರ್ಮಿಸಲು ಜಾಗ ಲಭ್ಯವಿಲ್ಲದ ಕಾರಣ ಈಗಾಗಲೇ ಪ್ರಾಧಿಕಾರವು ಅನುಮೋದನೆ ನೀಡಿರುವ ಸಿ.ಪಿ.ಸಿ. ವಿನ್ಯಾಸದಲ್ಲಿ ಸಿ.ಎ. ನಿವೇಶನಕ್ಕೆಂದು ಕಾಯ್ದಿರಿಸಿರುವ ಜಾಗವನ್ನು ಪೌರಾಯುಕ್ತರು ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಜಂಟಿಯಾಗಿ ಪರಿಶೀಲಿಸಿ, ಸಿ.ಎ. ನಿವೇಶನಕ್ಕೆ ಬೇಲಿ ಅಳವಡಿಸಿ ಸದರಿ ಜಾಗವನ್ನು ಪ್ರಾದಿಕಾರಕ್ಕೆ ಖಾತೆ ವರ್ಗಾವಣೆ ಮಾಡಿಕೊಡುವಂತೆ ಮಡಿಕೇರಿ ಕ್ಷೇತ್ರದ ವಿಧಾನ ಸಭಾ ಸದಸ್ಯರು ಪೌರಾಯುಕ್ತರಿಗೆ ಸೂಚಿಸಿದರು. ಇದಕ್ಕೆ ಸಭೆಯು ಒಪ್ಪಿ ಹಿಂದಿನ ಸಭಾ ನಡಾವಳಿಗೆ ಸರ್ವಾನುಮತದ ಅಂಗೀಕಾರ ನೀಡಿತು.

**2)ವಿಷಯಸಂಖ್ಯೆ 2:–** ಶ್ರೀ ಬಿ.ಸಿ.ಪೂಣಚ್ಚರವರ ಅರ್ಜಿಗೆ ಸಂಬಂಧಿಸಿದಂತೆ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 300/22 ರಲ್ಲಿನ 0.25ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಪ್ರಾಧಿಕಾರದ ನಿರಾಕ್ಷೇಪಣಾ ಪತ್ರವನ್ನು ತಹಶೀಲ್ದಾರರು, ಮಡಿಕೇರಿ ತಾಲ್ಲೂಕುರವರು ಅವರ ಪತ್ರ ಸಂಖ್ಯೆ: ಭೂಪರಿ/130/2016–17, ದಿನಾಂಕ:31.08.2016ರಲ್ಲಿ ಕೋರಿರುತ್ತಾರೆ.

**ಟಿಪ್ಪಣಿ:–**ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಸರ್ಕಾರದಿಂದ ಅನುಮೋದನೆಯಾಗಿರುವ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಪಶ್ಚಿಮದಲ್ಲಿ 7.50ಮೀ ಅಗಲದ ಟಾರ್ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ವಾಯುವ್ಯದ ತುದಿಯಿಂದ ಉತ್ತರದಲ್ಲಿರುವ ಹಾಲಿ ಟಾರ್ ರಸ್ತೆ ಮಧ್ಯದಿಂದ (ಸೋಮವಾರ ಪೇಟೆ–ಅಬ್ಬಿಫಾಲ್ಸ್ ರಸ್ತೆ) 7.40ಮೀ ಅಂತರದಲ್ಲಿರುತ್ತದೆ ಹಾಗೂ ಸದರಿ ಜಾಗದಲ್ಲಿ ಸುಮಾರು 130ಚ.ಮೀ ವಿಸ್ತೀರ್ಣದ ನೆಲ+ಒಂದನೇ ಅಂತಸ್ತಿನ ಹಳೆಯ ವಸತಿ ಕಟ್ಟಡವಿದ್ದು, ಸುತ್ತಮುತ್ತಲು ವಸತಿ ಬೆಳವಣಿಗೆಗಳು ಬಂದಿದ್ದು, ವಸತಿ ಉಪಯೋಗಕ್ಕೆ ಅನುಕೂಲಕರವಾಗಿರುತ್ತದೆ. ಸದರಿ ನಿವೇಶನಕ್ಕೆ ಹಾಲಿ ಇರುವ ಉತ್ತರದ ರಸ್ತೆಯನ್ನು 15.00ಮೀ ಗೆ

ಹಾಗೂ ಪಶ್ಚಿಮದ ರಸ್ತೆಯನ್ನು 9.00ಮೀ ಅಗಲಕ್ಕೆ ವಿಸ್ತರಿಸುವ ಷರತ್ತಿಗೊಳಪಟ್ಟು ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಾಗವು ನಗರಸಭಾ ವ್ಯಾಪ್ತಿಯಲ್ಲಿ ಬರುತ್ತಿದ್ದು, ಅರ್ಜಿದಾರರು ಪ್ರತೀ ವರ್ಷವು ನಗರಸಭೆಯಲ್ಲಿ ಕಂದಾಯವನ್ನು ಸಹ ಪಾವತಿಸುತ್ತಿರುವುದರಿಂದ ಇದನ್ನು ಪರಿಗಣಿಸಿ ಭೂ ಪರಿವರ್ತಿಸಲು ನಿಯಾಮಾನುಸಾರ ಕ್ರಮ ವಹಿಸಬಹುದೆಂದು ಸಭೆಯು ಸವಾನುಮತದ ಅಂಗೀಕಾರ ನೀಡಿತು.

**<u>3)ವಿಷಯಸಂಖ್ಯೆ 3:–</u>** ಶ್ರೀ ಕೆ.ಎಂ.ಗಣೇಶ್‌ರವರ ಅರ್ಜಿಗೆ ಸಂಬಂಧಿಸಿದಂತೆ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂಬರ್ 30/17 ರಲ್ಲಿನ 1.20 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಪ್ರಾಧಿಕಾರದ ನಿರಾಕ್ಷೇಪಣಾ ಪತ್ರವನ್ನು ತಹಶೀಲ್ದಾರರು, ಮಡಿಕೇರಿ ತಾಲ್ಲೂಕುರವರು ಅವರ ಪತ್ರ ಸಂಖ್ಯೆ: ಭೂಪರಿ/178/2016–17, ದಿನಾಂಕ:23.11.2016ರಲ್ಲಿ ಕೋರಿರುತ್ತಾರೆ.

**<u>ಟಿಪ್ಪಣಿ:–</u>** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಸರ್ಕಾರದಿಂದ ಅನುಮೋದನೆಯಾಗಿರುವ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಉತ್ತರದ 4.30ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ ಹಾಗೂ ಈ ಜಾಗದಲ್ಲಿ ಶಿಥಿಲವಾದ ಮಂಗಳೂರು ಹಂಚಿನ ಕಟ್ಟಡ ಇದ್ದು, ಸುತ್ತಮುತ್ತಲು ವಸತಿ ಬೆಳವಣಿಗೆಗಳು ಬಂದಿದ್ದು, ಅಭಿವೃದ್ಧಿ ಹೊಂದಿದ ಪ್ರದೇಶಕ್ಕೆ ಹೊಂದಿಕೊಂಡಿರುತ್ತದೆ ಹಾಗೂ ವಸತಿ ಉದ್ದೇಶಕ್ಕೆ ಸೂಕ್ತವಾಗಿರುವುದರಿಂದ ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನನ್ನು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಲಾಯಿತು ಹಾಗೂ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂಬರ್ 30/17 ರಲ್ಲಿನ 1.20 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿಯಾಮಾನುಸಾರ ಕ್ರಮ ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>4)ವಿಷಯಸಂಖ್ಯೆ 4:–</u>** ಶ್ರೀ ಸಿದ್ದಂಡ ಕೆ.ಈರಪ್ಪ ರವರು ಅರ್ಜಿ ಸಲ್ಲಿಸಿ, ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ನಿಡುಗಣೆ ಗ್ರಾಮದ ಸರ್ವೆ ನಂಬರ್ 71/33 ರಲ್ಲಿನ 1.10 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯ ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.

**<u>ಟಿಪ್ಪಣಿ:–</u>** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಸರ್ಕಾರದಿಂದ ಅನುಮೋದನೆಯಾಗಿರುವ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಉತ್ತರದಲ್ಲಿ 14.70ಮೀ ಅಗಲದ ಮಡಿಕೇರಿಯಿಂದ ಗಾಳಿಬೀಡಿಗೆ ಹಾದು ಹೋಗುವ ಮುಖ್ಯ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ ಹಾಗೂ ಈ ಜಾಗದ ಸುತ್ತಮುತ್ತ ವಾಣಿಜ್ಯ ಹಾಗೂ ವಸತಿ ಬೆಳವಣಿಗೆಗಳು ಬಂದಿದ್ದು, ವಸತಿ ಉದ್ದೇಶಕ್ಕೆ ಸೂಕ್ತವಾಗಿರುವುದರಿಂದ ಹಾಲಿ ಇರುವ ರಸ್ತೆಯನ್ನು

ಮಹಾಯೋಜನೆಯಂತೆ 15.00ಮೀ ಅಗಲಕ್ಕೆ ವಿಸ್ತರಿಸುವ ಷರತ್ತಿಗೊಳಪಟ್ಟು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಈ ಮೇಲಿನ ಕೆ.ನಿಡುಗಣೆ ಗ್ರಾಮದ ಸರ್ವೆ ನಂಬರ್ 71/33ರಲ್ಲಿನ 1.10 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಲು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**5)ವಿಷಯಸಂಖ್ಯೆ 5:–** ಶ್ರೀ ಅಪ್ಪರಾವ್ ಮತ್ತು ಸುಬ್ಬಾಯಮ್ಮರವರಿಂದ ಅಧಿಕಾರ ಪತ್ರ ಪಡೆದ ಶ್ರೀ ಸಾಯಿಕುಮಾರ್‌ರವರು ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 543/73 ರಲ್ಲಿನ 18.95 ಎಕರೆ ಮತ್ತು ಸರ್ವೆ ನಂಬರ್ 543/74 ರಲ್ಲಿನ 19.10 ಎಕರೆ ಒಟ್ಟು 38.05ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ವಿನ್ಯಾಸ ನಕ್ಷೆಗೆ ಅನುಮೋದನೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗ ಮತ್ತು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಸದರಿ ಜಾಗವು ಕರ್ಣಂಗೇರಿ ಗ್ರಾಮದ ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿದ್ದು, ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಸತಿ ವಲಯದಲ್ಲಿ ಬರುತ್ತಿದೆ ಹಾಗೂ ಉತ್ತರದಲ್ಲಿ 6.00ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಹೊಂದಿರುತ್ತದೆ. ಪ್ರಸ್ತಾವಿತ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯಿಂದ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿರುತ್ತದೆ ಹಾಗೂ ಮಾನ್ಯ ಜಿಲ್ಲಾಧಿಕಾರಿಯವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಭೂಪರಿ/261/2014–15, ದಿನಾಂಕ:25.01.2016 ಮತ್ತು ಭೂಪರಿ/243/2014–15, ದಿನಾಂಕ:25.01.2016ರಂದು ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತಿಸಿ ಆದೇಶ ನೀಡಿರುತ್ತಾರೆ.

ಹಾಲಿ ಸದರಿ ಜಮಿನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿ ಪಡಿಸಿ ವಿನ್ಯಾಸ ರಚಿಸುವ ಬಗ್ಗೆ ಪ್ರಾಧಿಕಾರದ ಅನುಮೋದನೆಯನ್ನು ಕೋರಿ ಅರ್ಜಿದಾರರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–** ವಿಧಾನ ಸಭಾ/ವಿಧಾನ ಪರಿಷತ್ ಸದಸ್ಯರುಗಳವರೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ಮುಂದಿನ ಸಭೆಯಲ್ಲಿ ಮಂಡಿಸಲು ಕ್ರಮ ಕೈಗೊಳ್ಳಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**6)ವಿಷಯಸಂಖ್ಯೆ 6:–** ಶ್ರೀ ಎನ್.ಹರಿನಾರಾಯಣನ್ ಮತ್ತು ಶ್ರೀಮತಿ ಎನ್.ಸಿವಕಾಮಿ, ಜಯಂಕೊಂಡಂರ್ ಎಸ್ಟೇಟ್, ಇಬ್ನಿವಳವಾಡಿ ಗ್ರಾಮ, ಮಡಿಕೇರಿ ಇವರು ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಇಬ್ನಿವಳವಾಡಿ ಗ್ರಾಮದ ಸರ್ವೆ ನಂಬರ್ 142 ರಲ್ಲಿನ 0.92 ಎಕರೆ, 149/1 ರಲ್ಲಿನ 0.78 ಎಕರೆ, 149/3 ರಲ್ಲಿನ 0.40 ಎಕರೆ ಮತ್ತು 149/4 ರಲ್ಲಿನ 2.40 ಎಕರೆ ಒಟ್ಟು 4.50 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್ ನಿರ್ಮಿಸಲು) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಮೀನು ಮಡಿಕೇರಿಯಿಂದ ಕುಶಾಲನಗರಕ್ಕೆ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 275 ರಿಂದ ದಕ್ಷಿಣಕ್ಕೆ ಸುಮಾರು 1.00ಕಿ.ಮೀ ದೂರದಲ್ಲಿದ್ದು, ಉತ್ತರದಲ್ಲಿ 6.00ಮೀ ಅಗಲದ ಬಂಡಿದಾರಿ (ಸಾರ್ವಜನಿಕ ರಸ್ತೆ)ಯಿಂದ

ಸಂಪರ್ಕ ಹೊಂದಿರುತ್ತದೆ ಹಾಗೂ ಸಮೀಪದಲ್ಲಿ ವಸತಿ ಬೆಳವಣಿಗೆಗಳು ಬಂದಿರುತ್ತದೆ. ಈ ಯೋಜನೆಯಿಂದ ಸುತ್ತಮುತ್ತಲಿನ ಜನರಿಗೆ ಉದ್ಯೋಗ ಸೃಷ್ಟಿಯಾಗುವುದರ ಜೊತೆಗೆ ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದ ತುಂಬಾ ಉಪಯೋಗವಾಗುವ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದರೂ ವಾಣಿಜ್ಯ ಉದ್ದೇಶದ ಪ್ರವಾಸೋದ್ಯಮ ನಡೆಸಲು ಸದರಿ ಜಾಗವು ಸೂಕ್ತವಾಗಿರುವುದರಿಂದಲೂ ಅರ್ಜಿದಾರರು ಸಲ್ಲಿಸಿರುವ ಹಿತಾಸಕ್ತಿ ಪತ್ರದಂತೆ, ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಇಬ್ನಿವಳವಾಡಿ ಗ್ರಾಮದ ಸರ್ವೆ ನಂಬರ್ 142 ರಲ್ಲಿನ 0.92 ಎಕರೆ, 149/1 ರಲ್ಲಿನ 0.78 ಎಕರೆ, 149/3 ರಲ್ಲಿನ 0.40 ಎಕರೆ ಮತ್ತು 149/4 ರಲ್ಲಿನ 2.40 ಎಕರೆ ಒಟ್ಟು 4.50 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್ ನಿರ್ಮಿಸಲು) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನಿಡಿತು.

**7)ವಿಷಯಸಂಖ್ಯೆ 7:–** ಶ್ರೀಮತಿ ಕೆ.ಗೊಂಬೆ ಚೆಣ್ಣಪ್ಪ, ವೃಂದಾವನ ಕೂರ್ಗ್ ಯಾತ್ರಿ ನಿವಾಸ್, ಬ್ಲಾಕ್ ನಂ–23, ಸಂಪಿಗೆ ಕಟ್ಟೆ, ಮಡಿಕೇರಿ ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ, ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ. 292/13 ರಲ್ಲಿರುವ 0.50 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 0.35 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಸರ್ಕಾರದಿಂದ ಅನುಮೋದನೆಯಾಗಿರುವ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, 18.00ಮೀ ಅಗಲದ ಸೋಮವಾರಪೇಟೆಯಿಂದ – ಮಡಿಕೇರಿಗೆ ಹಾದು ಹೋಗುವ ರಾಜ್ಯ ಹೆದ್ದಾರಿಯಿಂದ ಸಂಪರ್ಕ ಹೊಂದಿರುತ್ತದೆ. ಈ ಜಾಗದಲ್ಲಿ ವಸತಿಗೆ ಅನುಮತಿ ಪಡೆದು ಕಟ್ಟಡ ನಿರ್ಮಿಸಿದ್ದು, ಇದೇ ಸ್ಥಳವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡಲು ಕೋರಿರುತ್ತಾರೆ ಹಾಗೂ ಈ ಯೋಜನೆಯಿಂದ ಸಾರ್ವಜನಿಕರಿಗೆ ಅನುಕೂಲತೆ ಇದ್ದು, ಪ್ರವಾಸಿಗರಿಗೆ ತಂಗುವ ವ್ಯವಸ್ಥೆಯ ಜೊತೆಗೆ ಊಟೋಪಚಾರ ಮತ್ತು ವಿವಿಧ ಸೌಲಭ್ಯಗಳು ಸಿಗಲಿದೆ ಎಂದು ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಪತ್ರ ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು

ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ವಸತಿ ವಲಯದಲ್ಲಿದ್ದು, ಅರ್ಜಿದಾರರು ಈಗಾಗಲೇ ವಸತಿ ಉದ್ದೇಶದ ಕಟ್ಟಡಕ್ಕೆ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆದು 0.15ಎಕರೆ ಜಾಗದಲ್ಲಿ ವಸತಿ ಕಟ್ಟಡ ನಿರ್ಮಿಸಿ ಉಳಿದ 0.35 ಎಕರೆ ವಿಸ್ತೀರ್ಣದ ಜಾಗದಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸಿರುವುದು ಕಂಡುಬಂದಿರುತ್ತದೆ. ಈಗಾಗಲೇ ಸದರಿ ಕಟ್ಟಡದಲ್ಲಿ ಪ್ರವಾಸೋದ್ಯಮದ ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿರುವುದರಿಂದಲೂ ಸ್ಥಳೀಯರಿಗೆ ಉದ್ಯೋಗವಕಾಶ ಹಾಗೂ ಪ್ರವಾಸೋದ್ಯಮವನ್ನು ಬೆಳೆಸುವ ನಿಟ್ಟಿನಲ್ಲಿ ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯವನ್ನು ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂ. 292/13 ರಲ್ಲಿರುವ 0.50 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 0.35 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**<u>8)ವಿಷಯಸಂಖ್ಯೆ 8:–</u>** ಶ್ರೀಮತಿ ಪ್ರತಿಭಾ ರೈ, ವಿಜಯ ವಿನಾಯಕ ದೇವಸ್ಥಾನದ ಹತ್ತಿರ, ಮಡಿಕೇರಿ ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ, ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ.33 ರಲ್ಲಿನ 1.52 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**<u>ಟಿಪ್ಪಣಿ:–</u>** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಸರ್ಕಾರದಿಂದ ಅನುಮೋದನೆಯಾಗಿರುವ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದು, ಸದರಿ ಜಾಗಕ್ಕೆ 5.00ಮೀ ಅಗಲದ ಗ್ರಾಮ ಪಂಚಾಯಿತಿ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಮಡಿಕೇರಿ – ಮಂಗಳೂರು ರಾಜ್ಯ ಹೆದ್ದಾರಿಯಿಂದ ಸುಮಾರು 2.00 ಕಿ.ಮೀ ದೂರದಲ್ಲಿ ಇರುತ್ತದೆ. ಈ ಯೋಜನೆಯಿಂದ ಪ್ರವಾಸಿಗರಿಗೆ ಹಾಸ್ಪಿಟಾಲಿಟಿ (ಅಥಿತಿ ಸತ್ಕಾರ) ಊಟ, ವಸತಿ ಸೌಕರ್ಯ ಒದಗಿಸುವ ಹಾಗೂ ಸ್ಥಳೀಯರಿಗೆ ಉದ್ಯೋಗವಕಾಶ ನೀಡುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಸರ್ಕಾರದ ಪತ್ರ ಸಂಖ್ಯೆ: ನಅಇ/452/ಮೈಅಪ್ರಾ/2016, ದಿನಾಂಕ:24.08.2016ರಲ್ಲಿ ಸದರಿ ವಿಷಯದ ಬಗ್ಗೆ ನಿಯಾಮಾನುಸಾರ ಪರಿಶೀಲಿಸಿ, ಕ್ರಮ ವಹಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ. ಈ ಬಗ್ಗೆ ನಿಯಾಮಾನುಸಾರ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದರೂ ವಾಣಿಜ್ಯ ಉದ್ದೇಶದ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸುವ

ಹಾಗೂ ಸ್ಥಳೀಯರಿಗೆ ಉದ್ಯೋಗ ಅವಕಾಶವನ್ನು ನೀಡುವ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯವನ್ನು ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ.33 ರಲ್ಲಿನ 1.52 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**<u>9)ವಿಷಯ ಸಂಖ್ಯೆ 9 :–</u>** ಶ್ರೀ ಕೊಕ್ಕಲೆರ ಕಾರ್ಯಪ್ಪ, ಶ್ರೀಮತಿ ಶಾಂತಿ ಕಾರ್ಯಪ್ಪ ಮತ್ತು ಶ್ರೀ ಕೆ.ಕೆ. ಸೋಮಣ್ಣ, ಮ್ಯಾನ್ಸ್ ಕಾಂಪೌಂಡ್, ಮಡಿಕೇರಿ ತಾಲ್ಲೂಕು, ಮಡಿಕೇರಿ ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ, ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ಬಾಡಗ ಗ್ರಾಮದ ಸರ್ವೆ ನಂ. 53/3 ರಲ್ಲಿನ 0.80 ಎಕರೆ, 53/6 ರಲ್ಲಿನ 3.00 ಎಕರೆ, 53/7 ರಲ್ಲಿನ 0.24 ಎಕರೆ ಒಟ್ಟು 4.04 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಮತ್ತು ಕೃಷಿ ವಲಯದಿಂದ ವಾಣಿಜ್ಯ (ಹೋಟೇಲ್ ಮತ್ತು ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**<u>ಟಿಪ್ಪಣಿ:–</u>** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಸರ್ಕಾರದಿಂದ ಅನುಮೋದನೆಯಾಗಿರುವ ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ಹಾಗೂ ಕೃಷಿ ವಲಯದಲ್ಲಿ ಬರುತ್ತಿದ್ದು, ಸದರಿ ಜಾಗಕ್ಕೆ ಪಶ್ಚಿಮದಲ್ಲಿ 8.00ಮೀ ಅಗಲದ ಮಡಿಕೇರಿಯಿಂದ ಅಬ್ಬಿಫಾಲ್ಸ್‌ಗೆ ಹಾದು ಹೋಗುವ ಮುಖ್ಯ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಈ ಜಾಗದಲ್ಲಿ ಹಳೆಯ ವಸತಿ ಕಟ್ಟಡ ಇರುತ್ತದೆ ಹಾಗೂ ಸುತ್ತಮುತ್ತ ವಸತಿ, ವಾಣಿಜ್ಯ ಮತ್ತು ಸಾರ್ವಜನಿಕ ಅರೆ ಸಾರ್ವಜನಿಕ ಕಟ್ಟಡಗಳು ಬಂದಿರುತ್ತದೆ. ಸದರಿ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳಾದ ಉತ್ತಮ ವಸತಿ ಗೃಹಗಳು ಹಾಗೂ ಊಟದ ವ್ಯವಸ್ಥೆಯನ್ನು ಮಾಡುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ವಸತಿ ಮತ್ತು ಕೃಷಿ ವಲಯದಿಂದ ವಾಣಿಜ್ಯ (ಹೋಟೇಲ್ ಮತ್ತು ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ವಸತಿ ಹಾಗೂ ಕೃಷಿ ವಲಯದಲ್ಲಿ ಬರುತ್ತಿದ್ದರೂ ವಾಣಿಜ್ಯ ಉದ್ದೇಶದ ಪ್ರವಾಸೋದ್ಯಮ ನಡೆಸಲು ಸದರಿ ಜಾಗವು ಸೂಕ್ತವಾಗಿರುವುದರಿಂದಲೂ ಅರ್ಜಿದಾರರು ಸಲ್ಲಿಸಿರುವ ಹಿತಾಸಕ್ತಿ ಪತ್ರದಂತೆ, ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನಿಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನನ್ನು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಲಾಯಿತು ಹಾಗೂ ಈ ಮೇಲಿನ ಸರ್ವೆ ನಂಬರುಗಳಲ್ಲಿ ಒಟ್ಟು 4.04ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಮತ್ತು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶದ ಹೊಟೇಲ್ ಮತ್ತು ರೆಸಾರ್ಟ್ ಕಟ್ಟಡ ನಿರ್ಮಿಸಲು ಪ್ರಸ್ತಾವನೆಯನ್ನು ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**10)ವಿಷಯಸಂಖ್ಯೆ 10:–** ಶ್ರೀ ಯಂ.ವಿ.ಸುಬ್ರಾಯ, ಕೆ.ನಿಡುಗಣೆ ಗ್ರಾಮ, ಮಡಿಕೇರಿ ತಾಲ್ಲೂಕು ಮಡಿಕೇರಿ ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ನಿಡುಗಣೆ ಗ್ರಾಮದ ಸರ್ವೆ ನಂ. 1/40 ರಲ್ಲಿನ 5.50 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ಹೊಟೇಲ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**<u>ಟಿಪ್ಪಣಿ:–</u>** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಾಗಕ್ಕೆ ಪಶ್ಚಿಮದಲ್ಲಿ 13.00ಮೀ ಅಗಲದ ಮಡಿಕೇರಿಯಿಂದ–ಅಬ್ಬಿಫಾಲ್ಸ್‌ಗೆ ಹಾದು ಹೋಗುವ ಮುಖ್ಯ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಆರ್.ಟಿ.ಒ. ಕಚೇರಿ ಹತ್ತಿರದಲ್ಲಿ ಬರುತ್ತದೆ ಹಾಗೂ ಸಮೀಪದಲ್ಲಿ ವಸತಿ ಹಾಗೂ ಸಾರ್ವಜನಿಕ ಬೆಳವಣಿಗೆಗಳು ಬಂದಿರುತ್ತದೆ.

ಈ ಯೋಜನೆಯಿಂದ ಪ್ರವಾಸೋದ್ಯಮಕ್ಕೆ ಒತ್ತು ನೀಡಲು ಹಾಗೂ ಆರ್.ಟಿ.ಒ. ಕಚೇರಿಗೆ ಬರುವ ಸಾರ್ವಜನಿಕರಿಗೆ ಊಟದ ಹಾಗೂ ಉಪಹಾರ ವ್ಯವಸ್ಥೆ ಹಾಗೂ ಕನಿಷ್ಠ ಸೌಲಭ್ಯಗಳಾದ ವಾಹನ ನಿಲುಗಡೆ, ಶೌಚಾಲಯಗಳನ್ನು ಒದಗಿಸುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ಹೊಟೇಲ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದರೂ ಸದರಿ ಜಾಗದ ಪಕ್ಕದಲ್ಲಿ ಆರ್.ಟಿ.ಒ.ಕಚೇರಿ ಹಾಗೂ ಇತರ ಸಾರ್ವಜನಿಕ ಬೆಳವಣಿಗೆಗಳು ಇದ್ದು, ಸುತ್ತಮುತ್ತಲೂ ವಾಣಿಜ್ಯ ಚಟುವಟಿಕೆಗಳಾದ ಹೊಟೇಲ್ ಅಥವಾ ಇನ್ನಾವುದೇ ವಾಣಿಜ್ಯ ಉದ್ದೇಶದ ಚಟುವಟಿಕೆಗಳು ಇಲ್ಲದಿರುವುದರಿಂದ ಸಾರ್ವಜನಿಕರಿಗೆ ಹೆಚ್ಚಿನ ಅನಾನುಕೂಲತೆ ಆಗುವುದರಿಂದ ವಾಣಿಜ್ಯ ಉದ್ದೇಶದ ಅಭಿವೃದ್ಧಿಯ ಅವಶ್ಯಕತೆ ಇರುವುದರಿಂದ ಸದರಿ ಪ್ರಸ್ತಾವನೆಯನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನನ್ನು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಲಾಯಿತು ಹಾಗೂ ಈ ಮೇಲಿನ ಸರ್ವೆ ನಂಬರ್‌ನಲ್ಲಿರುವ ಒಟ್ಟು 5.50 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉದ್ದೇಶದ ಹೊಟೇಲ್ ನಿರ್ಮಿಸಲು ಪ್ರಸ್ತಾವನೆಯನ್ನು ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**11)ವಿಷಯ ಸಂಖ್ಯೆ 11:–** ಶ್ರೀ ಬಿ.ಕೆ.ಸತೀಶ್, ಕೆದಮುಳ್ಳೂರು ಅಂಚೆ, ವಿರಾಜಪೇಟೆ ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ.244/32ರ 0.60ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ಹೋಟೇಲ್ ಮತ್ತು ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತದೆ. ದಕ್ಷಿಣದಲ್ಲಿ 6.40ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಈ ಜಾಗದಲ್ಲಿ ಸುಮಾರು 110ಚ.ಮೀ ವಿಸ್ತೀರ್ಣದಲ್ಲಿ ಕಟ್ಟಡ ಇರುತ್ತದೆ. ಈ ಯೋಜನೆಯಿಂದ ಮಡಿಕೇರಿಯಲ್ಲಿ ಪ್ರವಾಸಿಗರಿಗೆ ವಸತಿ ಮತ್ತು ಊಟೋಪಚಾರದ ಸೌಲಭ್ಯವನ್ನು ಒದಗಿಸುವ ಸಲುವಾಗಿ ಹಾಗೂ ಸ್ಥಳೀಯರಿಗೆ ಉದ್ಯೋಗವಕಾಶ ನೀಡುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–**ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತಿದ್ದರೂ ಅರ್ಜಿದಾರರು ತಮ್ಮ ಮನವಿಯಲ್ಲಿ ಕೃಷಿ ವಲಯವೆಂದು ನಮೂದಿಸಿರುತ್ತಾರೆ. ಆದರೆ ಸ್ಥಳವು ಮಹಾಯೋಜನೆಯಂತೆ ವಸತಿ ವಲಯದಲ್ಲಿರುವುದರಿಂದ ಸದರಿ ಸ್ಥಳವು ವಾಣಿಜ್ಯ ಉದ್ದೇಶಕ್ಕೆ ಸೂಕ್ತವಾಗಿರುವುದೆಂದು ಅಭಿಪ್ರಾಯ ಪಟ್ಟಿದ್ದು ಹಾಗೂ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ.244/32ರ 0.60ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ (ಹೋಟೇಲ್ ಮತ್ತು ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**12)ವಿಷಯ ಸಂಖ್ಯೆ 12:–** ಶ್ರೀ ಎಂ.ಎಸ್.ಜಲೇಂದ್ರ, ಶ್ರೀ ಎಂ.ಎಸ್.ಪ್ರಸನ್ನ ಮತ್ತು ಶ್ರೀ ಎಂ.ಎಸ್.ಪ್ರತಾಪ್, C/o ನಂಬರ್ ಬಿ1, 112/3, ಗೋಕುಲ ಅಪಾರ್ಟ್‌ಮೆಂಟ್, ಬೆಂಗಳೂರು ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 193 ರಲ್ಲಿನ 4.95 ಎಕರೆ, 195/2 ರಲ್ಲಿನ 2.53 ಎಕರೆ, 196/2 ರಲ್ಲಿನ 20.00 ಎಕರೆ, 224/1 ರಲ್ಲಿನ 0.26 ಎಕರೆ ಮತ್ತು 284 ರಲ್ಲಿನ 1.16 ಎಕರೆ ಒಟ್ಟು 28.90 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಾಗಕ್ಕೆ ಮಡಿಕೇರಿಯಿಂದ– ಭಾಗಮಂಡಲಕ್ಕೆ ಹಾದು ಹೋಗುವ 10.50ಮೀ ಅಗಲದ ಜಿಲ್ಲಾ ಮುಖ್ಯ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಈ ಯೋಜನೆಯಿಂದ ಸಾರ್ವಜನಿಕರಿಗೆ ಅತೀ ಕಡಿಮೆ ದರದಲ್ಲಿ ಹಾಗೂ ಕೈಗೆಟುಕುವ ಬೆಲೆಯಲ್ಲಿ ನಿವೇಶನಗಳನ್ನು ಹಂಚುವ ಹಾಗೂ ಅಗತ್ಯ ಮೂಲ ಭೂತ ಸೌಕರ್ಯಗಳನ್ನು ಒದಗಿಸುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಸರ್ಕಾರದ ಪತ್ರ ಸಂಖ್ಯೆ: ನಅಇ/452/ಮೈಅಪ್ರಾ/2016, ದಿನಾಂಕ:24.08.2016ರಲ್ಲಿ ಸದರಿ ವಿಷಯದ ಬಗ್ಗೆ ನಿಯಾಮಾನುಸಾರ ಪರಿಶೀಲಿಸಿ, ಕ್ರಮ ವಹಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ. ಈ ಬಗ್ಗೆ ನಿಯಾಮಾನುಸಾರ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಅಧ್ಯಕ್ಷರು, ಮದೆ ಗ್ರಾಮ ಪಂಚಾಯಿತಿ ಕಚೇರಿ, ಮದೆರವರು ದಿನಾಂಕ:12.12.2016ರಲ್ಲಿ ಆಕ್ಷೇಪಣಾ ಪತ್ರವನ್ನು ಸಲ್ಲಿಸಿ ಸದರಿ ಜಾಗವನ್ನು ವಸತಿ ಉಪಯೋಗಕ್ಕೆ ಭೂ ಪರಿವರ್ತನೆ ಮಾಡಿಕೊಡಲು ಕೋರಿರುವ ಬಗ್ಗೆ ಮದೆ ಗ್ರಾಮ ಪಂಚಾಯಿತಿ ವತಿಯಿಂದ ತೀವ್ರ ಆಕ್ಷೇಪ ಇರುತ್ತದೆ ಎಂದು ತಿಳಿಸಿರುತ್ತಾರೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದರೂ ವಸತಿ ಉಪಯೋಗಕ್ಕೆ ಸೂಕ್ತವಾಗಿದ್ದು, ಈವರೆವಿಗೂ ಜಮೀನಿನ ಅಭಾವದಿಂದಾಗಿ ಪ್ರಾಧಿಕಾರದ ವತಿಯಿಂದ ಯಾವುದೇ ಜಮೀನನ್ನು ಭೂ ಸ್ವಾಧೀನ/ಭೂ ಖರೀದಿಸಿ ಅಭಿವೃದ್ಧಿ ಪಡಿಸಿ ಸಾರ್ವಜನಿಕರಿಗೆ ಹಂಚಲು ಸಾಧ್ಯವಾಗದ ಕಾರಣ ಸದರಿ ಪ್ರಸ್ತಾವನೆಯಲ್ಲಿ ಸಾರ್ವಜನಿಕರಿಗೆ ಅತೀ ಕಡಿಮೆ ಬೆಲೆಯಲ್ಲಿ ನಿವೇಶನಗಳನ್ನು ನೀಡುವ ಹಿತದೃಷಿಯನ್ನು ಅರ್ಜಿದಾರರು ಹೊಂದಿರುವುದರಿಂದ ಸಾರ್ವಜನಿಕರ ಹಿತಾದೃಷ್ಟಿಯಿಂದ ಸದರಿ ಪ್ರಸ್ತಾವನೆಯನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವುದು ಸೂಕ್ತವೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯವನ್ನು ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನನ್ನು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಲಾಯಿತು ಹಾಗೂ ಸದರಿ ಪ್ರಸ್ತಾವನೆ ಬಗ್ಗೆ ಅಧ್ಯಕ್ಷರು, ಮದೆ ಗ್ರಾಮ ಪಂಚಾಯಿತಿ ಕಚೇರಿಯಿಂದ ಆಕ್ಷೇಪಣಾ ಪತ್ರವನ್ನು ಸಲ್ಲಿಸಿರುವ ಬಗ್ಗೆ ಸರ್ಕಾರದಿಂದ ಭೂ ಉಪಯೋಗ ಬದಲಾವಣೆ ಆದೇಶವಾಗಿ ಬಂದ ನಂತರ ಭೂ ಪರಿವರ್ತನೆಗೆ ಪಂಚಾಯಿತಿ ಕಚೇರಿಯಿಂದ ನಿರಾಕ್ಷೇಪನಾ ಪತ್ರ ಪಡೆಯುವ ಷರತ್ತನ್ನು ವಿಧಿಸಿ, ಪ್ರಸ್ತುತ ಈ ಮೇಲಿನ ಸರ್ವೆ ನಂಬರ್‌ಗಳಲ್ಲಿ ಬರುವ ಒಟ್ಟು 28.90 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಪ್ರಸ್ತಾವನೆಯನ್ನು ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**13)ವಿಷಯಸಂಖ್ಯೆ 13:–** ಶ್ರೀ ಎಲ್.ಕೆ.ಸತ್ಯನಾರಾಯಣ, ಶ್ರೀ ಚಿಕ್ಕಮುನಿಯಪ್ಪ ಮತ್ತು ಶ್ರೀ ಸುಬ್ರಮಣ್ಯ ಕುಕ್ಕೆ, ಕಾಟಕೇರಿ ಗ್ರಾಮ, ಮಡಿಕೇರಿ ತಾಲ್ಲೂಕುರವರು ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 55/1ರ 2.72 ಎಕರೆ ಪೈಕಿ 0.72ಎಕರೆ, 55/2ರ 1.72 ಎಕರೆ ಪೈಕಿ 0.50ಎಕರೆ, 55/3ಎ ರಲ್ಲಿನ 0.82ಎಕರೆ ಪೈಕಿ 0.50ಎಕರೆ 55/4 ರಲ್ಲಿನ 1.06 ಎಕರೆ ಪೈಕಿ 0.28 ಎಕರೆ ಒಟ್ಟು 2.00 ಎಕರೆ ವಿಸ್ತೀರ್ಣದ

ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್ ಮತ್ತು ಕಾಟೇಜಸ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಾಗಕ್ಕೆ ಉತ್ತರದಲ್ಲಿ 5.50ಮೀ ಅಗಲದ ಗ್ರಾಮ ಪಂಚಾಯಿತಿ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಈ ಯೋಜನೆಯಿಂದ ಸ್ಥಳೀಯರಿಗೆ ಉದ್ಯೋಗ ಕಲ್ಪಿಸಿಕೊಡುವ ಹಾಗೂ ಪ್ರವಾಸೋದ್ಯಮ ಉತ್ತೇಜಿಸುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–**ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದರೂ ವಾಣಿಜ್ಯ ಉದ್ದೇಶದ ಪ್ರವಾಸೋದ್ಯಮ ನಡೆಸಲು ಸದರಿ ಜಾಗವು ಸೂಕ್ತವಾಗಿರುವುದರಿಂದಲೂ ಅರ್ಜಿದಾರರು ಸಲ್ಲಿಸಿರುವ ಹಿತಾಸಕ್ತಿ ಪತ್ರದಂತೆ, ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 55/1ರ 2.72 ಎಕರೆ ಪೈಕಿ 0.72ಎಕರೆ, 55/2ರ 1.72 ಎಕರೆ ಪೈಕಿ 0.50ಎಕರೆ, 55/3ಎ ರಲ್ಲಿನ 0.82ಎಕರೆ ಪೈಕಿ 0.50ಎಕರೆ 55/4 ರಲ್ಲಿನ 1.06 ಎಕರೆ ಪೈಕಿ 0.28 ಎಕರೆ ಒಟ್ಟು 2.00 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್ ಮತ್ತು ಕಾಟೇಜಸ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**14)ವಿಷಯ ಸಂಖ್ಯೆ 14:–** ಶ್ರೀ ಕೆ.ಎ.ಪೊನ್ನಪ್ಪ, ಇಬ್ನಿವಳವಾಡಿ ಗ್ರಾಮ, ಮಡಿಕೇರಿ ತಾಲ್ಲೂಕು, ಮಡಿಕೇರಿ ಇವರು ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಇಬ್ನಿವಳವಾಡಿ ಗ್ರಾಮದ ಸರ್ವೆ ನಂ. 69/11 ರಲ್ಲಿನ 2.20ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ಹೋಟೇಲ್ ಮತ್ತು ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಾಗಕ್ಕೆ 5.00ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಈ ಜಾಗದಲ್ಲಿ ರೆಸಾರ್ಟ್‌ಗೆ ಸಂಬಂಧಿಸಿದ ಕೆಲವು ಕಟ್ಟಡಗಳಿರುತ್ತದೆ. ಈ ಯೋಜನೆಯಿಂದ ಪ್ರವಾಸಿ ತಾಣವಾಗಿರುವ ಮಡಿಕೇರಿಗೆ ಬರುವ ಪ್ರವಾಸಿಗರಿಗೆ ವಸತಿ ಮತ್ತು ಊಟೋಪಚಾರದ ಸೌಲಭ್ಯಗಳನ್ನು ಒದಗಿಸುವ ಹಾಗೂ ಸ್ಥಳೀಯರಿಗೆ ಉದ್ಯೋಗವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ಹೋಟೇಲ್ ಮತ್ತು ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ

ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–**ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದರೂ ಕೃಷಿ ವಲಯದಿಂದ ವಾಣಿಜ್ಯ ಉದ್ದೇಶದ ಪ್ರವಾಸೋದ್ಯಮ ನಡೆಸಲು ಸದರಿ ಜಾಗವು ಸೂಕ್ತವಾಗಿರುವುದರಿಂದಲೂ ಹಾಗೂ ಈಗಾಗಲೇ ಅಲ್ಲಿ ರೆಸಾರ್ಟ್ ಕಟ್ಟಡ ಇರುವುದನ್ನು ಪರಿಗಣಿಸಿ ಅರ್ಜಿದಾರರು ಸಲ್ಲಿಸಿರುವ ಹಿತಾಸಕ್ತಿ ಪತ್ರದಂತೆ, ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಮತ್ತು ಸ್ಥಳೀಯರಿಗೆ ಉದ್ಯೋಗವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಮಡು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನಿಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಇಬ್ನಿವಳವಾಡಿ ಗ್ರಾಮದ ಸರ್ವೆ ನಂ. 69/11 ರಲ್ಲಿನ 2.20ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ಹೊಟೇಲ್ ಮತ್ತು ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**15)ವಿಷಯಸಂಖ್ಯೆ 15:–** ಮೆ॥ಬೇಕಲ್ ಹಾಸ್ಪಿಟಾಲಿಟಿ ಪ್ರೈ.ಲಿ. ಇವರ ಪರವಾಗಿ ಶ್ರೀ ಬೇಕಲ್ ಮೊಹಮ್ಮದ್ ಶಾಲಿ, ಕಾಟಕೇರಿ ಗ್ರಾಮ, ತಾಳತ್ತಮನೆ ಅಂಚೆ, ಮಡಿಕೇರಿ ಇವರು ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 216/12 ರಲ್ಲಿನ 0.50 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ (ಹೊಟೇಲ್ ಮತ್ತು ವಿಲ್ಲಾ) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಸತಿ ವಲಯದಲ್ಲಿ ಬರುತ್ತದೆ. ಸದರಿ ಜಾಗಕ್ಕೆ 12.00ಮೀ ಅಗಲದ ಮಡಿಕೇರಿಯಿಂದ–ಮಂಗಳೂರಿಗೆ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 276ರ ಸಂಪರ್ಕ ಹೊಂದಿರುತ್ತದೆ. ಈ ಜಾಗದಲ್ಲಿ 4 ಕಟ್ಟಡಗಳು ಇರುತ್ತದೆ. ಈ ಯೋಜನೆಯಿಂದ ಹತ್ತು ಹಲವು ಮಂದಿಗೆ ಉದ್ಯೋಗ ಅವಕಾಶ ನೀಡುವ, ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರಿಗೆ ತಂಗುವ ವ್ಯವಸ್ಥೆಯ ಜೊತೆಗೆ ಊಟೋಪಚಾರ ಮತ್ತು ವಿವಿಧ ಸೌಲಭ್ಯಗಳನ್ನು ಸಾರ್ವಜನಿಕರಿಗೆ ನೀಡುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ (ಹೊಟೇಲ್ ಮತ್ತು ವಿಲ್ಲಾ) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಈಗಾಗಲೇ ಪ್ರಾಧಿಕಾರದಿಂದ ವಸತಿ ಉದ್ದೇಶಕ್ಕೆ ಕಟ್ಟಡ

ನಿರ್ಮಿಸಲು ತಾಂತ್ರಿಕ ಅನುಮೋದನೆಯನ್ನು ಪಡೆದುಕೊಂಡು ಗ್ರಾಮ ಪಂಚಾಯಿತಿ ಕಚೇರಿಯಿಂದ ಪರವಾನಿಗೆಯನ್ನು ಪಡೆದು ಕಟ್ಟಡ ನಿರ್ಮಿಸಿರುತ್ತಾರೆ. ನಂತರದಲ್ಲಿ ಸದರಿ ಕಟ್ಟಡದಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಮತ್ತು ಸ್ಥಳೀಯರಿಗೆ ಉದ್ಯೋಗವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಪರಿಗಣಿಸಿ ಪ್ರಸ್ತಾವಿತ ಜಾಗವನ್ನು ವಸತಿ ವಲಯದಿಂದ ವಾಣಿಜ್ಯ (ಹೋಟೇಲ್ ಮತ್ತು ವಿಲ್ಲಾ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂ. 216/12 ರಲ್ಲಿನ 0.50 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ (ಹೋಟೇಲ್ ಮತ್ತು ವಿಲ್ಲಾ) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಒಪ್ಪಿ ಸರ್ವಾನುಮತದ ಅಂಗೀಕಾರ ನೀಡಿತು.

**<u>16)ವಿಷಯ ಸಂಖ್ಯೆ 16</u>:–** ಶ್ರೀಮತಿ ಸಂಗೀತಾ ಪ್ರಸನ್ನ, ಸಂಪಿಗೆ ಕಟ್ಟೆ, ಮಡಿಕೇರಿ ರವರು ಅರ್ಜಿ ಸಲ್ಲಿಸಿ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 99/49ರಲ್ಲಿನ 0.17ಎಕರೆ ಜಮೀನಿನ ಪೈಕಿ 0.10ಎಕರೆ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯ ತಾಂತ್ರಿಕ ಅಭಿಪ್ರಾಯವನ್ನು ಕೋರಿರುತ್ತಾರೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1(ಅಂತಿಮ) 2021ರನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದು, ಜಾಗದ ದಕ್ಷಿಣದಲ್ಲಿ 4.00ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕವನ್ನು ಹೊಂದಿರುತ್ತದೆ ಹಾಗೂ ಸಮೀಪದಲ್ಲಿ ವಸತಿ ಬೆಳವಣಿಗೆಗಳು ಬಂದಿರುತ್ತದೆ. ವಲಯನಿಯಾಮಾವಳಿ ಪುಸ್ತಕದ ಪುಟ ಸಂಖ್ಯೆ 60.2.2.8(ಎ)ರಂತೆ ಹಾಗೂ ಪ್ರಾಧಿಕಾರದ ಸಭೆಯ ನಡಾವಳಿ ದಿನಾಂಕ: 16.10.2001ರ ವಿಷಯ ಸಂಖ್ಯೆ 14ರಂತೆ ಕೃಷಿ ವಲಯದಲ್ಲಿ ಬರುವ ಜಮೀನಿನಲ್ಲಿ 0.10 ಎಕರೆ ಜಾಗಕ್ಕೆ ಮಿತಿಗೊಳಿಸಿ ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪನಾ ಪತ್ರ ನೀಡಲು ಅವಕಾಶ ಕಲ್ಪಿಸಲಾಗಿದೆ.

ಪ್ರಸ್ತಾವಿತ ಜಾಗವು ಮೂಲ ಸರ್ವೆ ನಂಬರ್ 99/1 ರಿಂದ ವಿಂಗಡಿಸಿದ ಸರ್ವೆ ನಂಬರ್ 99/49ರಲ್ಲಿ ಬರುವ 0.17 ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 0.10 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಈ ಕಚೇರಿಯಿಂದ ನಿರಾಕ್ಷೇಪಣಾ ಪತ್ರವನ್ನು ನೀಡಬಹುದಾದರೂ ಸಹ ಶ್ರೀ ಕೆ.ಎಂ.ಕಾರ್ಯಪ್ಪ, ಮಡಿಕೇರಿರವರು ದಿನಾಂಕ:14.09.2015ರಂದು ಅರ್ಜಿ ಸಲ್ಲಿಸಿ ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 99/1ರಲ್ಲಿ ಬರುವ ಒಟ್ಟು 39.94ಎಕರೆ ವಿಸ್ತೀರ್ಣದ ಜಮೀನಿನ ಬಗ್ಗೆ ಸೀನಿಯರ್ ಸಿವಿಲ್ ನ್ಯಾಯಾಲಯ, ಮಡಿಕೇರಿಯಲ್ಲಿ ಓ.ಎಸ್.ನಂಬರ್ 77/2013ರಲ್ಲಿ ದಾವೆ ಹಾಕಿ ಸ್ಟೇ ಆಗಿರುವುದರಿಂದ ನ್ಯಾಯಾಲಯದಲ್ಲಿ ಕೇಸ್ ಇತ್ಯರ್ಥವಾಗುವವರೆಗೆ ಸದರಿ ಸರ್ವೆ ನಂಬರಿನಲ್ಲಿ ಬರುವ ಯಾವುದೇ ಜಾಗಕ್ಕೆ ಭೂ ಪರಿವರ್ತನೆ/ಭೂ ವಿನ್ಯಾಸ/ಕಟ್ಟಡ ನಿರ್ಮಿಸಲು ಅನುಮೋದನೆ ನೀಡಬಾರದಾಗಿ ಕೋರಿರುತ್ತಾರೆ. ಆದರೆ ಮಾನ್ಯ ತಹಶೀಲ್ದಾರರು ಹಾಗೂ ತಾಲ್ಲೂಕು ಕಾರ್ಯ ನಿರ್ವಾಹಕ ದಂಡಾಧಿಕಾರಿಗಳು, ಮಡಿಕೇರಿ ತಾಲ್ಲೂಕುರವರ ಪತ್ರ ಸಂಖ್ಯೆ:ತಮತ/ಎಂಸಿ/49/2016–17, ದಿನಾಂಕ:27.09.2016ರಲ್ಲಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದು

ನೊಂದಾಯಿತ ಕ್ರಯ ಪತ್ರ ಸಂಖ್ಯೆ: ಎಂಡಿಕೆ–01–000445/2015–16, ದಿನಾಂಕ:27.05.2015 ರಂದು ಖರೀದಿಸಿದ್ದ ಮಡಿಕೇರಿ ಹೋಬಳಿ ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 99/39ರ 1.10ಎಕರೆ ಪೈಕಿ 0.17ಎಕರೆಯನ್ನು ಮಾನ್ಯ ಸಿವಿಲ್ ನ್ಯಾಯಾಲಯದ ಅಂತಿಮ ಆದೇಶದ ಪಾಲನಾ ಷರತ್ತಿಗೊಳಪಟ್ಟು ಖಾತೆ ವರ್ಗಾವಣೆ ಮಾಡಲು ತಹಶೀಲ್ದಾರರ ನ್ಯಾಯಾಲಯದಲ್ಲಿ ಆದೇಶ ಮಾಡಿರುವಂತೆ ಶ್ರೀಮತಿ ಸಂಗೀತಾ ಪ್ರಸನ್ನರವರ ಹೆಸರಿನಲ್ಲಿ ಎಂ.ಸಿ. ಮತ್ತು ಆರ್.ಟಿ.ಸಿ.ಯಾಗಿರುತ್ತದೆ ಹಾಗೂ ಸದರಿ ಪ್ರಸ್ತಾವನೆ ಬಗ್ಗೆ ಪ್ರಾಧಿಕಾರದ ವಕೀಲರಾದ ಶ್ರೀ ರುದ್ರಪ್ರಸನ್ನರವರು ದಿನಾಂಕ:29.07.2016ರಂದು ಶ್ರೀ ಕಾರ್ಯಪ್ಪನವರು ಸಲ್ಲಿಸಿರುವ ನ್ಯಾಯಾಲಯದ ಸ್ಟೇ ಆದೇಶದಲ್ಲಿ ಸದರಿ ಜಮೀನಿನ ಭೂ ಮಾರಾಟ ಮಾಡುವುದನ್ನು ನಿಷೇಧಿಸಿ ಯಥಾಸ್ಥಿತಿಯನ್ನು (Status quo) ಮುಂದಿನ ನ್ಯಾಯಾಲಯದ ತೀರ್ಪಿನವರೆಗೆ ಕಾಯ್ದಿರಿಸುವಂತೆ ಆದೇಶ ನೀಡಲಾಗಿದೆಯೇ ಹೊರತು ಸದರಿ ಜಮೀನಿನಲ್ಲಿ ಇತರೆ ಯಾವುದೇ ಅಭಿವೃದ್ಧಿ ಅಥವಾ ಕಟ್ಟಡ ನಿರ್ಮಿಸಬಾರದೆಂದು ಆದೇಶವಿರುವುದಿಲ್ಲವೆಂದು ಕಾನೂನು ಸಲಹೆಯನ್ನು ನೀಡಿರುತ್ತಾರೆ. ಈ ಮೇಲಿನ ಎಲ್ಲಾ ಅಂಶಗಳೊಂದಿಗೆ ಭೂ ಪರಿವರ್ತಿಸಲು ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಮಾನ್ಯ ನ್ಯಾಯಾಲಯದ ಆದೇಶದಲ್ಲಿ ಯಥಾಸ್ಥಿತಿ ಕಾಪಾಡುವಂತೆ (Status quo Maintain) ಆದೇಶಿಸಿರುವುದರಿಂದ ಈ ಬಗ್ಗೆ ಎರಡನೇ ಬಾರಿಗೆ ಮತ್ತೊಮ್ಮೆ ನುರಿತ ವಕೀಲರಿಂದ ಕಾನೂನು ಸಲಹೆಯನ್ನು ಪಡೆದುಕೊಂಡು ಅದರಂತೆ ಕ್ರಮ ವಹಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

## 17) ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ಹೆಚ್ಚುವರಿ ವಿಷಯಗಳು:

1) **ವಿಷಯಸಂಖ್ಯೆ 1:–** ಶ್ರೀ ಕೇಶವ ಪ್ರಸಾದ್ ಮುಳಿಯ ಮತ್ತು ಶ್ರೀ ಕೃಷ್ಣ ನಾರಾಯಣ ಮುಳಿಯ ರವರು ಅರ್ಜಿ ಸಲ್ಲಿಸಿ, ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಕಾಟಕೇರಿ ಗ್ರಾಮದ ಸರ್ವೆ ನಂಬರ್ 206/9 ರ 3.80 ಎಕರೆ, 206/23ರ 1.85 ಎಕರೆ ಮತ್ತು ಸರ್ವೆ ನಂ. 207/2 ರ 1.50ಎಕರೆ ಒಟ್ಟು 7.15ಎಕರೆ ವಿಸ್ತೀರ್ಣದ ಜಮೀನಿಗೆ ವಾಣಿಜ್ಯ ಉದ್ದೇಶದ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಲು ಕೋರಿರುವ ಬಗ್ಗೆ.

**ಟಿಪ್ಪಣಿ:–**ಪ್ರಸ್ತಾವಿತ ಜಮೀನು ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಾಣಿಜ್ಯ ವಲಯದಲ್ಲಿ ಬರುತ್ತಿದ್ದು, ಹಾಲಿ ಜಮೀನಿಗೆ ಮಡಿಕೇರಿಯಿಂದ–ಮಂಗಳೂರಿಗೆ ಹಾದು ಹೋಗುವ 16.00ಮೀ ಅಗಲದ ರಾಷ್ಟ್ರೀಯ ಹೆದ್ದಾರಿ 275 ರಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿಯವರು ರಾಷ್ಟ್ರೀಯ ಹೆದ್ದಾರಿ ನಿಯಮದಂತೆ ಹಾಲಿ ರಸ್ತೆಯನ್ನು 45.00ಮೀ ಅಗಲಕ್ಕೆ ವಿಸ್ತರಿಸಿ, ಕಟ್ಟಡ ರೇಖೆಯನ್ನು 40.00ಮೀ ಎಂದು ಗುರುತಿಸಿ ನಕ್ಷೆ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಭೂ ಪರಿವರ್ತಿಸಲು ಈ ಕಚೇರಿ ಪತ್ರ ಸಂಖ್ಯೆ: ಮನಅಪ್ರಾ/ಭೂಪರಿ/ಕಾಟಕೇರಿ/ 54/2014–15 ರಲ್ಲಿ ನಿರಾಕ್ಷೇಪನಾ ಪತ್ರವನ್ನು ನೀಡಲಾಗಿರುತ್ತದೆ ಹಾಗೂ ಮಾನ್ಯ ಜಿಲ್ಲಾಧಿಕಾರಿಯವರ ಕಚೇರಿ ಆದೇಶ ಪತ್ರ ಸಂಖ್ಯೆ: ಭೂಪರಿ/168/2015–16, ದಿನಾಂಕ:18.02.2016ರಲ್ಲಿ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಿ ಆದೇಶ ನೀಡಲಾಗಿರುತ್ತದೆ.
ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಪ್ರಸ್ತಾವಿತ ಜಮಿನಿಗೆ ಈ ಕೆಳಕಂಡಂತೆ ಜಾಗ ಕಾಯ್ದಿರಿಸಿ, ಶುಲ್ಕ ಪಾವತಿಸಿಕೊಂಡು ವಿನ್ಯಾಸ ನಕ್ಷೆಯನ್ನು ಅನುಮೋದಿಸಬಹುದಾಗಿರುತ್ತದೆ.

**ಜಾಗದ ವಿವರ.**

| | | | |
|---|---|---|---|
| 1. | ವಾಣಿಜ್ಯ ಉದ್ದೇಶಕ್ಕೆ | 23971.69ಚ.ಮೀ | ಶೇ. 82.84 |
| 2. | ಉದ್ಯಾನವನ/ಬಯಲು ಪ್ರದೇಶ | 2893.60ಚ.ಮೀ | ಶೇ. 10.00 |
| 3. | ವಾಹನ ನಿಲುಗಡೆಗಾಗಿ | 1446.80ಚ.ಮೀ | ಶೇ. 5.00 |
| 4. | ರಸ್ತೆ ವಿಸ್ತರಣೆಗಾಗಿ | 623.98ಚ.ಮೀ | ಶೇ. 2.16 |

**ಶುಲ್ಕದ ವಿವರ.**

| | | | |
|---|---|---|---|
| 1 | ಪರಿಶೀಲನಾ ಶುಲ್ಕ | ರೂ. | 14,468.00 |
| 2. | ಕೆ.ಟಿ.ಸಿ.ಪಿ. ಕಾಯ್ದೆ ಕಲಂ 18ರಡಿ ಶುಲ್ಕ | ರೂ. | 1,15,745.00 |
| 3 | ಕೆರೆ ಅಭಿವೃದ್ಧಿ ಶುಲ್ಕ | ರೂ. | 2,89,370.00 |
| | **ಒಟ್ಟು ಶುಲ್ಕ** | ರೂ. | **4,19,583.00** |

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–**ಪ್ರಸ್ತಾವಿತ ಜಮೀನಿಗೆ ನಿಯಾಮಾನುಸಾರ ವಾಣಿಜ್ಯ ಉದ್ದೇಶದ ವಿನ್ಯಾಸಕ್ಕೆ ತಾಂತ್ರಿಕ ಅನುಮೋದನೆಯನ್ನು ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**2) ವಿಷಯಸಂಖ್ಯೆ 2:–** ಶ್ರೀಮತಿ ರಮ್ಯ ಹೇಮಂತ್ ಮತ್ತು ಶ್ರೀ ಹೇಮಂತ್ ಕುಮಾರ್‌ರವರು ಅರ್ಜಿ ಸಲ್ಲಿಸಿ, ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 122/6ರಲ್ಲಿನ 0.035 ಎಕರೆ 123/3ರ 0.16 ಎಕರೆ, 123/4 ರ 0.025 ಎಕರೆ, 123/5 ರ 0.045 ಎಕರೆ, 126/2 ರ 0.47 ಎಕರೆ, 127/1 ರ 0.35 ಎಕರೆ ಮತ್ತು 127/3ರ 0.05 ಎಕರೆ ಒಟ್ಟು 1.135 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯ ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.

**ಟಿಪ್ಪಣಿ:–**ಪ್ರಸ್ತಾವಿತ ಜಮೀನು ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1(ಅಂತಿಮ)2021ರನ್ವಯ ವಸತಿ ವಲಯದಲ್ಲಿ ಬರುತ್ತದೆ. ಹಾಲಿ ಜಮೀನಿಗೆ ಮಡಿಕೇರಿಯಿಂದ ಸೋಮವಾರಪೇಟೆಗೆ ಹಾದು ಹೋಗುವ 16.50ಮೀ ಅಗಲದ ರಾಜ್ಯ ಹೆದ್ದಾರಿಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಜಮೀನಿನ ಸುತ್ತಮುತ್ತ ಅಲ್ಲಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ವಸತಿ ಉಪಯೋಗಕ್ಕೆ ಸೂಕ್ತವಾಗಿರುವುದರಿಂದ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ ಸಬೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–**ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**3) ವಿಷಯಸಂಖ್ಯೆ 3:–** ಶ್ರೀ ಸಿ.ಪಿ.ಉತ್ತಪ್ಪ, ಬಿನ್॥ ಸಿ.ಡಿ.ಪೂವಯ್ಯ, ಕಾಲೂರು ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲ್ಲೂಕು ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಮಕ್ಕಂದೂರು ಗ್ರಾಮದ ಸರ್ವೆ ನಂ.264/4 ರಲ್ಲಿನ 2.60 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ಕೃಷಿ ವಲಯದಲ್ಲಿ ಬರುತ್ತದೆ. ಸದರಿ ಜಾಗಕ್ಕೆ ಪೂರ್ವದಲ್ಲಿ 6.00ಮೀ ಅಗಲದ ಸಿಂಕೋನ ರಸ್ತೆಯಿಂದ–ಮಕ್ಕಂದೂರಿಗೆ ಹಾದು ಹೋಗುವ ಗ್ರಾಮ ರಸ್ತೆ ಸಂಪರ್ಕ ಹೊಂದಿರುತ್ತದೆ. ಈ ಜಾಗದಲ್ಲಿ 3 ಕಟ್ಟಡಗಳಿದ್ದು, ಸಮೀಪದಲ್ಲಿ ವಸತಿ ಬೆಳವಣಿಗೆಗಳು ಬಂದಿರುತ್ತದೆ. ಮಡಿಕೇರಿಗೆ ಆಗಮಿಸುವ ಪ್ರವಾಸಿಗರ ಹಿತದೃಷ್ಟಿಯಿಂದ ವಸತಿ ಹಾಗೂ ಊಟೋಪಚಾರ ಸೌಲಭ್ಯವನ್ನು ಒದಗಿಸುವ ಹಾಗೂ ಸ್ಥಳೀಯರಿಗೆ ಉದ್ಯೋಗವನ್ನು ನೀಡುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದರೂ ವಾಣಿಜ್ಯ ಉದ್ದೇಶದ ಪ್ರವಾಸೋದ್ಯಮ ನಡೆಸಲು ಸದರಿ ಜಾಗವು ಸೂಕ್ತವಾಗಿರುವುದರಿಂದಲೂ ಅರ್ಜಿದಾರರು ಸಲ್ಲಿಸಿರುವ ಹಿತಾಸಕ್ತಿ ಪತ್ರದಂತೆ, ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಮಕ್ಕಂದೂರು ಗ್ರಾಮದ ಸರ್ವೆ ನಂ.264/4 ರಲ್ಲಿನ 2.60 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ರೆಸಾರ್ಟ್) ನಿರ್ಮಿಸಲು ಉದ್ದೇಶಿಸಿರುವ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಬಹುದೆಂದು ಶಿಫಾರಸು ಮಾಡಿ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>4)ವಿಷಯಸಂಖ್ಯೆ 4:–</u>** ಶ್ರೀ ಎನ್.ಜಿ.ರಾಮಚಂದ್ರ, ಹಿಲ್ ರಸ್ತೆ, ಮಡಿಕೇರಿ ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ನಗರಸಭಾ ಬ್ಲಾಕ್ ನಂಬರ್ 07ರ ಸರ್ವೆ ನಂಬರ್ 40 ರಲ್ಲಿನ 0.13 ಎಕರೆ, 40/1 ರಲ್ಲಿನ 0.01 ಎಕರೆ, 50 ರಲ್ಲಿನ 0.30 ಎಕರೆ, 52 ರಲ್ಲಿನ 0.24 ಎಕರೆ ಮತ್ತು 53 ರಲ್ಲಿನ 0.34 ಎಕರೆ ಒಟ್ಟು 1.02 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ (ಹೊಟೇಲ್ ಮತ್ತು ಕಲ್ಯಾಣ ಮಂಟಪ) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತದೆ. ಸದರಿ ಜಾಗಕ್ಕೆ ಉತ್ತರದಲ್ಲಿ 11.60ಮೀ ಹಾಗೂ ಪೂರ್ವದಲ್ಲಿ 5.00ಮೀ ಅಗಲದ ಸಾರ್ವಜನಿಕ ರಸ್ತೆಗಳಿಂದ ಸಂಪರ್ಕ ಹೊಂದಿದ್ದು, ಸಮೀಪದಲ್ಲಿ ವಸತಿ ಹಾಗೂ ಸಾರ್ವಜನಿಕ ಬೆಳವಣಿಗೆಗಳು ಬಂದಿರುತ್ತದೆ. ಮಡಿಕೇರಿ ನಗರದಲ್ಲಿ ಎರಡು ಅಥವಾ ಮೂರು ಮಾತ್ರ ಕಲ್ಯಾಣ ಮಂಟಪವಿದ್ದು, ಸಾರ್ವಜನಿಕರಿಗೆ ಅನಾನುಕೂಲತೆ ಆಗುವುದನ್ನು ತಡೆಗಟ್ಟುವ, ಸ್ಥಳೀಯರಿಗೆ ಹೆಚ್ಚಿನ ಉದ್ಯೋಗವಕಾಶವನ್ನು ನೀಡುವ ಮತ್ತು ಊಟೋಪಚಾರದ ವ್ಯವಸ್ಥೆಯನ್ನು ಸರಾಗವಾಗಿ ಮಾಡುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ

(ಹೋಟೇಲ್ ಮತ್ತು ಕಲ್ಯಾಣ ಮಂಟಪ) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತಿದ್ದರೂ ವಾಣಿಜ್ಯ ಉದ್ದೇಶದ ಹೊಟೇಲ್ ಮತ್ತು ಕಲ್ಯಾಣ ಮಂಟಪ ನಡೆಸಲು ಸದರಿ ಜಾಗವು ಸೂಕ್ತವಾಗಿರುವುದರಿಂದಲೂ ಅರ್ಜಿದಾರರು ಸಲ್ಲಿಸಿರುವ ಹಿತಾಸಕ್ತಿ ಪತ್ರದಂತೆ, ಸ್ಥಳೀಯರಿಗೆ ಹೆಚ್ಚಿನ ಉದ್ಯೋಗವಕಾಶವನ್ನು ನೀಡುವ ಮತ್ತು ಊಟೋಪಚಾರದ ವ್ಯವಸ್ಥೆಯನ್ನು ಸರಾಗವಾಗಿ ಮಾಡುವ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ವಾಣಿಜ್ಯ (ಹೊಟೇಲ್ ಮತ್ತು ಕಲ್ಯಾಣ ಮಂಟಪ) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ನಗರಸಭಾ ಬ್ಲಾಕ್ ನಂಬರ್ 07ರ ಸರ್ವೆ ನಂಬರ್ 40 ರಲ್ಲಿನ 0.13 ಎಕರೆ, 40/1 ರಲ್ಲಿನ 0.01 ಎಕರೆ, 50 ರಲ್ಲಿನ 0.30 ಎಕರೆ, 52 ರಲ್ಲಿನ 0.24 ಎಕರೆ ಮತ್ತು 53 ರಲ್ಲಿನ 0.34 ಎಕರೆ ಒಟ್ಟು 1.02 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ (ಹೊಟೇಲ್ ಮತ್ತು ಕಲ್ಯಾಣ ಮಂಟಪ) ನಿರ್ಮಿಸಲು ಉದ್ದೇಶಿಸಿರುವ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಬಹುದೆಂದು ಶಿಫಾರಸು ಮಾಡಿ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>5) ವಿಷಯಸಂಖ್ಯೆ 5:–</u>** ಶ್ರೀ ಬಿ.ಎನ್. ರತ್ನಾಕರ ರೈ, ಬಿನ್॥ ಬಿ.ಎಸ್.ನಾರಾಯಣ ರೈ, ಮೇಕೇರಿ ಗ್ರಾಮ, ಕಗ್ಗೋಡ್ಲು ಅಂಚೆ, ಮಡಿಕೇರಿ ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂ. 30/6 ರಲ್ಲಿನ 1.05 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ (ಹೊಟೇಲ್ ಕಂ ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತದೆ. ಸದರಿ ಜಾಗಕ್ಕೆ ಉತ್ತರದಲ್ಲಿ 10.90ಮೀ ಅಗಲದ ಭಾಗಮಂಡಲದಿಂದ – ಮೇಕೇರಿ ಜಂಕ್ಷನ್‌ಗೆ ಹಾದು ಹೋಗುವ ಜಿಲ್ಲಾ ಮುಖ್ಯ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಈ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿದ್ದು, ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿ ಬರುತ್ತದೆ. ಈ ಯೋಜನೆಯಿಂದ ಮಡಿಕೇರಿಗೆ ಆಗಮಿಸುವ ಪ್ರವಾಸಿಗರ ಹಿತದೃಷ್ಟಿಯಿಂದ ವಸತಿ ಹಾಗೂ ಊಟೋಪಚಾರ ಸೌಲಭ್ಯವನ್ನು ಒದಗಿಸುವ ಹಾಗೂ ಸ್ಥಳೀಯರಿಗೆ ಉದ್ಯೋಗ ಸೃಷ್ಟಿಸುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ (ಹೊಟೇಲ್ ಕಂ ರೆಸಾರ್ಟ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತಿದ್ದರೂ ವಾಣಿಜ್ಯ ಉದ್ದೇಶದ ಪ್ರವಾಸೋದ್ಯಮ ನಡೆಸಲು ಸದರಿ ಜಾಗವು ಸೂಕ್ತವಾಗಿರುವುದರಿಂದಲೂ ಅರ್ಜಿದಾರರು ಸಲ್ಲಿಸಿರುವ ಹಿತಾಸಕ್ತಿ ಪತ್ರದಂತೆ, ಮಡಿಕೇರಿಗೆ ಆಗಮಿಸುವ ಪ್ರವಾಸಿಗರ ಹಿತದೃಷ್ಟಿಯಿಂದ ವಸತಿ ಹಾಗೂ ಊಟೋಪಚಾರ ಸೌಲಭ್ಯವನ್ನು ಒದಗಿಸುವ ಹಾಗೂ ಸ್ಥಳೀಯರಿಗೆ ಉದ್ಯೋಗ ಸೃಷ್ಟಿಸುವ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ವಾಣಿಜ್ಯ (ಹೋಟೇಲ್ ಕಂ ರೆಸಾರ್ಟ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನನ್ನು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ, ಮುಂದಿನ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**<u>6) ವಿಷಯಸಂಖ್ಯೆ 6:–</u>** ಮೆ॥ ತಲಕಾವೇರಿ ಪ್ಲಾಂಟೇಷನ್ಸ್.ಪ್ರೈ.ಲಿ, ಇವರ ಪರವಾಗಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪಿ.ಪಿ. ಪರಮೇಶ್ವರ ನಾಯರ್, ನಂಬರ್–1, ಜಿಯಾ ಹೊಟೇಲ್ ಕಾಂಪ್ಲೆಕ್ಸ್, ದೇವಾಂಗ ಹಾಸ್ಟೆಲ್ ರಸ್ತೆ, ಬೆಂಗಳೂರು ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 258/5 ರಲ್ಲಿನ 0.60 ಎಕರೆ, 258/7 ರಲ್ಲಿನ 11.31 ಎಕರೆ, 259 ರಲ್ಲಿನ 1.00 ಎಕರೆ ಮತ್ತು ಇಬ್ನಿವಳವಾಡಿ ಗ್ರಾಮದ ಸರ್ವೆ ನಂಬರ್ 201/6 ರಲ್ಲಿನ 6.02 ಎಕರೆ ಒಟ್ಟು 18.93 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ (ಹೊಟೇಲ್, ರೆಸಾರ್ಟ್, ಸ್ಪಾ ಮತ್ತು ಶಾಪಿಂಗ್ ಕಾಂಪ್ಲೆಕ್ಸ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿದ್ದು, ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಮಡಿಕೇರಿಯಿಂದ–ಸಿದ್ದಾಪುರಕ್ಕೆ ಹಾದು ಹೋಗುವ 12.00ಮೀ ಅಗಲದ ರಾಜ್ಯ ಹೆದ್ದಾರಿ ಸಂಪರ್ಕ ಹಾಗೂ 10.00ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಈ ಜಾಗದ ಸುತ್ತಮುತ್ತ ವಸತಿ ಹಾಗೂ ಸಾರ್ವಜನಿಕ ಬೆಳವಣಿಗೆಗಳು ಬಂದಿದ್ದು, ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿ ಬರುತ್ತದೆ. ಈ ಯೋಜನೆಯಿಂದ ಸ್ಥಳೀಯರಿಗೆ ಉದ್ಯೋಗವಕಾಶ, ಸ್ಥಳೀಯ ಸಂಸ್ಥೆಗೆ ದೊಡ್ಡ ಮೊತ್ತದ ಕಂದಾಯ ಬರುತ್ತದೆ, ಸ್ಥಳೀಯ ಸಣ್ಣಪುಟ್ಟ ಅಂಗಡಿಯವರಿಗೆ ವ್ಯಾಪಾರ ವಹಿವಾಟು ಹೆಚ್ಚಾಗುತ್ತದೆ, ಪ್ರವಾಸಿಗರನ್ನು ಕರೆತರಲು ಬಾಡಿಗೆಗೆ ಓಡಿಸುವ ಟ್ಯಾಕ್ಸಿಗಳು, ಆಟೋದವರಿಗೆ ಹೆಚ್ಚಿನ ಅನುಕೂಲವಾಗುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ (ಹೊಟೇಲ್, ರೆಸಾರ್ಟ್, ಸ್ಪಾ ಮತ್ತು ಶಾಪಿಂಗ್ ಕಾಂಪ್ಲೆಕ್ಸ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸ್ವಾಮಿ ವಿವೇಕಾನಂದ ಜನ ಸೇವಾ ಸಂಘ(ರಿ), ಆಕ್ಷೇಪಣಾ ಅರ್ಜಿಯನ್ನು ಸಲ್ಲಿಸಿ, ಅರ್ಜಿದಾರರು ರೆಸಾರ್ಟ್ ನಿರ್ಮಿಸುವುದರಿಂದ ವಾಹನ ದಟ್ಟಣೆ, ಕಸದ ಸಮಸ್ಯೆ, ವಾಯು ಮಾಲಿನ್ಯ, ದಿನನಿತ್ಯ ಬಳಸುವ ಬೆಲೆ ಏರಿಕೆ, ಕುಡಿಯುವ ನೀರಿಗೆ ತೊಂದರೆ ಹಾಗೂ ಸದರಿ ಜಾಗದ ಒತ್ತಿನಲ್ಲಿ ಸರ್ಕಾರದ ಅರಣ್ಯ ಜಾಗವಿದ್ದು, ಅರಣ್ಯೇತರ ಚಟುವಟಿಕೆಗಳಿಗೆ ಅರಣ್ಯ ಪ್ರದೇಶದ ಹದ್ದುಬಸ್ತಿನಿಂದ

100ಮೀ ಅಂತರವಿರಬೇಕು ಎಂಬ ನಿಯಮವಿದೆ ಎಂದು ಸದರಿ ಜಾಗವನ್ನು ಭೂ ಪರಿವರ್ತನೆ ಮಾಡಬಾರದೆಂದು ಅರ್ಜಿಯಲ್ಲಿ ತಿಳಿಸಿರುತ್ತಾರೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತಿದ್ದರೂ ವಾಣಿಜ್ಯ ಉದ್ಯಮ ನಡೆಸಲು ಸದರಿ ಜಾಗವು ಸೂಕ್ತವಾಗಿರುವುದರಿಂದಲೂ ಅರ್ಜಿದಾರರು ಸಲ್ಲಿಸಿರುವ ಹಿತಾಸಕ್ತಿ ಪತ್ರದಂತೆ, ಸ್ಥಳೀಯರಿಗೆ ಉದ್ಯೋಗವಕಾಶ, ಸ್ಥಳೀಯ ಸಂಸ್ಥೆಗೆ ದೊಡ್ಡ ಮೊತ್ತದ ಕಂದಾಯ ಬರುತ್ತದೆ, ಸ್ಥಳೀಯ ಸಣ್ಣಪುಟ್ಟ ಅಂಗಡಿಯವರಿಗೆ ವ್ಯಾಪಾರ ವಹಿವಾಟು ಹೆಚ್ಚಾಗುತ್ತದೆ, ಪ್ರವಾಸಿಗರನ್ನು ಕರೆತರಲು ಬಾಡಿಗೆಗೆ ಓಡಿಸುವ ಟ್ಯಾಕ್ಸಿಗಳು, ಆಟೋದವರಿಗೆ ಹೆಚ್ಚಿನ ಅನುಕೂಲವಾಗುವ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ವಾಣಿಜ್ಯ (ಹೊಟೇಲ್, ರೆಸಾರ್ಟ್, ಸ್ಪಾ ಮತ್ತು ಶಾಪಿಂಗ್ ಕಾಂಪ್ಲೆಕ್ಸ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನನ್ನು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಲಾಯಿತು. ಸದರಿ ಪ್ರಸ್ತಾವನೆ ಬಗ್ಗೆ ಅಧ್ಯಕ್ಷರು, ಸ್ವಾಮಿ ವಿವೇಕಾನಂದ ಜನ ಸೇವಾ ಸಂಘ(ರಿ), ಮಡಿಕೇರಿರವರು ಆಕ್ಷೇಪಣಾ ಅರ್ಜಿ ಸಲ್ಲಿಸಿರುವಂತೆ ಸದರಿ ಜಮೀನಿನ ಒಂದು ಭಾಗವು ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿದ್ದು, ಭೂ ಮಾಲೀಕರು ಅಭಿವೃದ್ಧಿ ಪಡಿಸುವಾಗ ಅರಣ್ಯದ ಮೂಲ ಸ್ವರೂಪಕ್ಕೆ ಧಕ್ಕೆ ಬಾರದಂತೆ ಅಭಿವೃದ್ಧಿ ಪಡಿಸುವ ಷರತ್ತಿಗೆ ಒಳಪಟ್ಟು ಪ್ರಸ್ತಾವಿತ ಒಟ್ಟು 18.93 ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ವಲಯದಿಂದ ವಾಣಿಜ್ಯ ಉದ್ದೇಶದ ಹೊಟೇಲ್, ರೆಸಾರ್ಟ್, ಸ್ಪಾ ಮತ್ತು ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸಲು ಪ್ರಸ್ತಾವನೆಯನ್ನು ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>7) ವಿಷಯಸಂಖ್ಯೆ 7:–</u>** ಶ್ರೀಮತಿ ಜಯಶೀಲ ಗಂಗಾಧರನ್, ಕೋಂ॥ಟಿ.ವಿ.ಗಂಗಾಧರನ್, ಕೆ.ನಿಡುಗಣೆ ಗ್ರಾಮ, ಮಡಿಕೇರಿ ತಾಲ್ಲೂಕು ಮಡಿಕೇರಿ ಇವರು ಈ ಕಚೇರಿಗೆ ಅರ್ಜಿ ಸಲ್ಲಿಸಿ ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕೆ.ನಿಡುಗಣೆ ಗ್ರಾಮದ ಸರ್ವೆ ನಂ. 71/24 ರಲ್ಲಿನ 3.75 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿರುವ ದಾಖಲೆ ಮತ್ತು ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದು, ಸದರಿ ಜಾಗಕ್ಕೆ ದಕ್ಷಿಣದಲ್ಲಿ ಮಡಿಕೇರಿ–ಗಾಳಿಬೀಡು ರಸ್ತೆಯಿಂದ ಮೊಣ್ಣಂಗೇರಿಗೆ ಹಾದು ಹೋಗುವ 7.10ಮೀ ಅಗಲದ ಗ್ರಾಮ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಈ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿದ್ದು, ವಸತಿ ಉದ್ದೇಶಕ್ಕೆ ಅನುಕೂಲಕರವಾಗಿರುತ್ತದೆ. ಈ ಯೋಜನೆಯಿಂದ 1)ಪ್ರಶ್ನಿತ ಜಾಗವನ್ನು ನಿವೇಶನಗಳನ್ನಾಗಿ ಮಾರ್ಪಡಿಸಿ ರಿಯಾಯಿತಿ ದರದಲ್ಲಿ ಸಾರ್ವಜನಿಕರಿಗೆ ಹಂಚುವ 2) ರಸ್ತೆ, ವಿದ್ಯುತ್ ಸಂಪರ್ಕ, ಕುಡಿಯುವ ನೀರು ಮುಂತಾದ ಮೂಲಭೂತ ಸೌಕರ್ಯಗಳನ್ನು ನಿವೇಶನದಾರರಿಗೆ ದೊರಕುವಂತೆ ಮಾಡುವ 3) ನಿವೇಶನದಲ್ಲಿ ಉದ್ಯಾನವನಕ್ಕಾಗಿ ಕಾಯ್ದಿರಿಸಿದ ಜಾಗವನ್ನು ಅಭಿವೃದ್ಧಿ ಪಡಿಸಿ ಸಾರ್ವಜನಿಕರಿಗೆ ಉಪಯೋಗಕ್ಕೆ ಅನುಕೂಲ ಮಾಡಿಕೊಡುವ 4) ವಿಶಾಲವಾದ ಮತ್ತು ಸುಸಜ್ಜಿತವಾದ ರಸ್ತೆ ಮತ್ತು ಚರಂಡಿಯನ್ನು ನಿರ್ಮಿಸುವ 5) ಪ್ರಾಧಿಕಾರದ ನಿಯಾಮಾನುಸಾರ ವಿನ್ಯಾಸವನ್ನು ಅಭಿವೃದ್ಧಿ ಪಡಿಸಿ ಉತ್ತಮ ಬಡಾವಣೆಯನ್ನು ನಿರ್ಮಿಸುವ ಸಾರ್ವಜನಿಕ ಹಿತಾಸಕ್ತಿ ಪತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಪ್ರಸ್ತಾವಿತ ಜಮೀನನ್ನು ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿದ್ದು, ನಿಗಧಿತ ಕಾಲಾವಕಾಶದೊಳಗೆ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣಾ ಅರ್ಜಿಗಳು ಬಂದಿರುವುದಿಲ್ಲ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆಯನ್ವಯ ಕೃಷಿ ವಲಯದಲ್ಲಿ ಬರುತ್ತಿದ್ದರೂ ವಸತಿ ಉದ್ದೇಶಕ್ಕೆ ಜಾಗವು ಸೂಕ್ತವಾಗಿರುವುದರಿಂದಲೂ ಅರ್ಜಿದಾರರು ಸಲ್ಲಿಸಿರುವ ಹಿತಾಸಕ್ತಿ ಪತ್ರದಂತೆ, 1)ಪ್ರಶ್ನಿತ ಜಾಗವನ್ನು ನಿವೇಶನಗಳನ್ನಾಗಿ ಮಾರ್ಪಡಿಸಿ ರಿಯಾಯಿತಿ ದರದಲ್ಲಿ ಸಾರ್ವಜನಿಕರಿಗೆ ಹಂಚುವ 2) ರಸ್ತೆ, ವಿದ್ಯುತ್ ಸಂಪರ್ಕ, ಕುಡಿಯುವ ನೀರು ಮುಂತಾದ ಮೂಲಭೂತ ಸೌಕರ್ಯಗಳನ್ನು ನಿವೇಶನದಾರರಿಗೆ ದೊರಕುವಂತೆ ಮಾಡುವ 3) ನಿವೇಶನದಲ್ಲಿ ಉದ್ಯಾನವನಕ್ಕಾಗಿ ಕಾಯ್ದಿರಿಸಿದ ಜಾಗವನ್ನು ಅಭಿವೃದ್ಧಿ ಪಡಿಸಿ ಸಾರ್ವಜನಿಕರಿಗೆ ಉಪಯೋಗಕ್ಕೆ ಅನುಕೂಲ ಮಾಡಿಕೊಡುವ 4) ವಿಶಾಲವಾದ ಮತ್ತು ಸುಸಜ್ಜಿತವಾದ ರಸ್ತೆ ಮತ್ತು ಚರಂಡಿಯನ್ನು ನಿರ್ಮಿಸುವ 5) ಪ್ರಾಧಿಕಾರದ ನಿಯಾಮಾನುಸಾರ ವಿನ್ಯಾಸವನ್ನು ಅಭಿವೃದ್ಧಿ ಪಡಿಸಿ ಉತ್ತಮ ಬಡಾವಣೆಯನ್ನು ನಿರ್ಮಿಸುವ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಶಿಫಾರಸ್ಸು ಮಾಡಬಹುದೆಂದು ಅಭಿಪ್ರಾಯ ನೀಡಿದರು.

ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನನ್ನು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಲಾಯಿತು ಹಾಗೂ ಈ ಮೇಲಿನ ಸರ್ವೆ ನಂಬರ್‌ನಲ್ಲಿ ಬರುವ ಒಟ್ಟು 3.75 ಎಕರೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಸತಿ ಉದ್ದೇಶದ ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**8) ವಿಷಯಸಂಖ್ಯೆ 8:–** ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 4/3ಎ ಮತ್ತು 4/3ಬಿ ರಲ್ಲಿರುವ ಒಟ್ಟು 60.00ಎಕರೆ ವಿಸ್ತೀರ್ಣದ ಜಮೀನನ್ನು ವಾಣಿಜ್ಯ (ರೆಸಾರ್ಟ್ ನಿರ್ಮಿಸಲು) ಭೂ ಪರಿವರ್ತನೆ ಮಾಡಲು ನಿರಾಕ್ಷೇಪಣಾ ಪತ್ರ ಕೋರಿ ಶ್ರೀ ಆಂಜನೇಯಲು ಪ್ರತಿಪಾಟಿ, ಮೆ॥ ರಸಶ್ರೀ ಡೆವಲಪರಸ್, ಬೆಂಗಳೂರುರವರು ಕೋರಿರುವ ಬಗ್ಗೆ.

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1 (ಅಂತಿಮ) 2021ರನ್ವಯ ವಾಣಿಜ್ಯ ಉಪಯೋಗದಲ್ಲಿದ್ದು, 7.50ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಜಾಗದ ಸುತ್ತಮುತ್ತ ಅಲ್ಲಲ್ಲಿ ವಸತಿ ಬೆಳವಣಿಗೆಗಳು ಕಂಡುಬರುತ್ತಿದ್ದು, ವಾಣಿಜ್ಯ ಉದ್ದೇಶದ ರೆಸಾರ್ಟ್ ನಿರ್ಮಿಸಲು ಹಾಲಿ ಇರುವ ರಸ್ತೆಯನ್ನು 12.00ಮೀ ಅಗಲಕ್ಕೆ ವಿಸ್ತರಿಸಿ, ಯಾವುದೇ ಮರಗಿಡಗಳನ್ನು ನಾಶ ಮಾಡದೆ ಪ್ರಕೃತಿ ಸೌಂದರ್ಯವನ್ನು ಯಥಾಸ್ಥಿತಿಯಲ್ಲಿ ಕಾಯ್ದಿರಿಸಿಕೊಂಡು ರೆಸಾರ್ಟ್ ನಿರ್ಮಿಸಲು ಅನುಮತಿ ನೀಡಲು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ–1(ಅಂತಿಮ)2021ರನ್ವಯ ಪ್ರಸ್ತಾವಿತ ಜಾಗವು ವಾಣಿಜ್ಯ ಉದ್ದೇಶಕ್ಕೆಂದು ಕಾಯ್ದಿರಿಸಲಾಗಿರುತ್ತದೆ. ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ತಾಣವಾಗಿ ಸರ್ಕಾರವೇ ಘೋಷಿಸಿದ್ದು, ಮಡಿಕೇರಿ ನಗರದಲ್ಲಿ ಹೊಟೇಲ್‌ಗಳು ಮತ್ತು ರೆಸಾರ್ಟ್‌ಗಳು ಬೆರಳೆಣಿಕೆಯಷ್ಟು ಮಾತ್ರ ಇದ್ದು, ಮಡಿಕೇರಿ ನಗರಕ್ಕೆ ಆಗಮಿಸುವ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯವನ್ನು ನೀಡುವ ಹಿತದೃಷ್ಟಿಯನ್ನು ಪರಿಗಣಿಸಿ ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ವಲಯನಿಯಾಮಾವಳಿಗಳನ್ವಯ ಭೂ ಪರಿವರ್ತನೆ ಆಗುವ ಒಟ್ಟು ಜಮೀನಿನಲ್ಲಿ ಶೇ.20

ರಷ್ಟು ವಿಸ್ತೀರ್ಣದ ಜಮೀನನ್ನು ಮಾತ್ರ ಕಟ್ಟಡ ನಿರ್ಮಿಸಲು ಹಾಗೂ ಸ್ಥಳೀಯರಿಗೆ ಉದ್ಯೋಗ ನೀಡುವ ಷರತ್ತಿಗೊಳಪಡಿಸಿ, ವಾಣಿಜ್ಯ(ರೆಸಾರ್ಟ್ ನಿರ್ಮಿಸಲು) ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಬಹುದಾಗಿರುತ್ತದೆ ಎಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**9) ವಿಷಯಸಂಖ್ಯೆ 9):-** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹೊರಗುತ್ತಿಗೆಯಲ್ಲಿ ನೇಮಿಸಿಕೊಂಡಿರುವ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ಗ್ರೂಪ್ ನೌಕರರುಗಳ ಸೇವೆಯನ್ನು ಪ್ರಾಧಿಕಾರದಲ್ಲೇ ಮುಂದುವರೆಸುತ್ತಾ ಅವರ ವೇತನವನ್ನು ಸರ್ಕಾರದ ಆದೇಶ ಸಂಖ್ಯೆ: ಕೆ.ಎ.ಇ/123/ಎಲ್.ಡಬ್ಲ್ಯೂ.ಎ/2015, ದಿನಾಂಕ:29.02.2016 ರಂತೆ ಪರಿಷ್ಕರಿಸಿ ಪಾವತಿಸಲು ಸಭಾ ಅನುಮೋದನೆ ಪಡೆಯುವ ಬಗ್ಗೆ.

**ಟಿಪ್ಪಣಿ:-**ಈ ಕಚೇರಿಗೆ ಮೆ॥ಓಶಿಯನ್ ಸೆಕ್ಯೂರಿಟಿ ಸರ್ವಿಸಸ್, ವಿರಾಜಪೇಟೆರವರ ಮೂಲಕ ಹೊರಗುತ್ತಿಗೆ ಆಧಾರದಲ್ಲಿ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ಗ್ರೂಪ್ ನೌಕರರುಗಳಿಬ್ಬರನ್ನು ನೇಮಿಸಿಕೊಂಡು ಕಚೇರಿಯ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವುದಾಗಿದೆ ಹಾಗೂ ಇವರುಗಳಿಗೆ ಪ್ರಾಧಿಕಾರದ ನಿಧಿಯಿಂದ ತಲಾ ರೂ.9,800/- ಮತ್ತು 8,000/- (ಏಜೆಂಟ್ ಕಮೀಷನ್ ಸೇರಿಕೊಂಡು) ಗಳನ್ನು ಪಾವತಿಸುತ್ತಿರುವುದಾಗಿದೆ. ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಈ ಇಬ್ಬರು ನೌಕರರುಗಳ ಸೇವೆಯು ಅತ್ಯಾವಶ್ಯಕವಾಗಿರುವುದರಿಂದ ಕರ್ನಾಟಕ ರಾಜ್ಯ ಅಧಿಸೂಚನೆ ಪ್ರಕಟಣೆ ದಿನಾಂಕ:24.09.2015 ಮತ್ತು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಕೆ.ಎ.ಇ/123/ಎಲ್.ಡಬ್ಲ್ಯೂ.ಎ/2015, ದಿನಾಂಕ:29.02.2016ರಂತೆ ಈ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ರವರಿಗೆ ಒಟ್ಟು ರೂ. 12,648.00 ಮತ್ತು 'ಡಿ' ದರ್ಜೆ ನೌಕರರಿಗೆ ರೂ. 10,375.60 ರಂತೆ ಒಟ್ಟು ರೂ. 23,023.00 (ಶೇ. 10 ಏಜೆಂಟ್ ಕಮೀಷನ್ ಸೇರಿಕೊಂಡು) ಮಾತ್ರವನ್ನು 2017-18ನೇ ಸಾಲಿಗೆ ಪಾವತಿಸುವಂತೆ ಹೊರಗುತ್ತಿಗೆದಾರರಾದ ಮೆ॥ಓಶಿಯನ್ ಸೆಕ್ಯೂರಿಟಿ ಸರ್ವೀಸಸ್‌ರವರು ದಿನಾಂಕ: 02.05.2017ರಂದು ಪತ್ರ ಸಲ್ಲಿಸಿ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:-** ಸದರಿ ಸಿಬ್ಬಂದಿಯವರ ಸೇವೆಯು ಪ್ರಾಧಿಕಾರಕ್ಕೆ ಅತ್ಯಾವಶ್ಯಕವಾಗಿರುವುದರಿಂದ ಇವರುಗಳ ಸೇವೆಯನ್ನು ಪ್ರಾಧಿಕಾರದಲ್ಲಿ ಮುಂದಿನ ಅವಧಿಯವರೆಗೆ ಮುಂದುವರೆಸಿಕೊಂಡು ಹೋಗುವಂತೆಯೂ ಈಗಾಗಲೇ ಮೆ॥ ಓಶಿಯನ್ ಸೆಕ್ಯೂರಿಟಿ ಸರ್ವೀಸಸ್‌ರವರು ಸಲ್ಲಿಸಿರುವ ಪತ್ರದಲ್ಲಿ ಲಗತ್ತಿಸಿರುವ ಸರ್ಕಾರದ ಪತ್ರದ ಆದೇಶದನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಕಾಇ/71/ಎಲ್.ಡಬ್ಲ್ಯೂ.ಎ./2015, ದಿನಾಂಕ:04.08.2016ರಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯವರಿಗೆ ಪರಿಷ್ಕೃತ ಕನಿಷ್ಟ ವೇತನವನ್ನು ಪಾವತಿಸಲು ನೀಡಿರುವ ಆದೇಶದನ್ವಯ ದಿನಾಂಕ:01.04.2017ರಿಂದ ಪರಿಷ್ಕೃತ ವೇತನ **ಕಂಪ್ಯೂಟರ್ ಆಪರೇಟರ್‌ರವರಿಗೆ ಒಟ್ಟು ರೂ. 12,648.00 ಮತ್ತು 'ಡಿ' ದರ್ಜೆ ನೌಕರರಿಗೆ ರೂ. 10,375.60 ರಂತೆ ಒಟ್ಟು ರೂ. 23,023.00 (ಶೇ. 10 ಏಜೆಂಟ್ ಕಮೀಷನ್ ಸೇರಿಕೊಂಡು)** ಮಾತ್ರವನ್ನು 2017-18ನೇ ಸಾಲಿಗೆ ಪಾವತಿಸಲು ಕ್ರಮ ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**10) ವಿಷಯಸಂಖ್ಯೆ 10):-** ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ: ನ.ಗ್ರಾ.ಯೋ.ನಿ/ಕಪ/ಸುತ್ತೋಲೆ/2015-16, ದಿನಾಂಕ:04.05.2017ರಲ್ಲಿ ಕನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರನ್ವಯ ನಗರ/ಪಟ್ಟಣಗಳಿಗೆ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸುವ ಮುಂಚಿತವಾಗಿಯೇ ಭೂ ಪರಿವರ್ತನೆಯಾದ ಜಮೀನುಗಳನ್ನು ವಿಭಜಿಸಿ, ಸ್ಥಳೀಯ ಸಂಸ್ಥೆಯಲ್ಲಿ ಖಾತೆ ತೆರೆದಿರುವ ನಿವೇಶನಗಳಿಗೆ ಕಟ್ಟಡ ನಿಮಾಣ ಮಾಡುವ ಸಂಬಂಧ ತಾಂತ್ರಿಕ ಅಭಿಪ್ರಾಯ ನೀಡುವ ಬಗ್ಗೆ.

**ಟಿಪ್ಪಣಿ:–** ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ: ನ.ಗ್ರಾ.ಯೋ.ನಿ/ಕಪ/ಸುತ್ತೋಲೆ/2015–16, ದಿನಾಂಕ:04.05.2017ರ ಸುತ್ತೋಲೆಯನ್ನು ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಮಂಡಿಸಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಸಂಬಂಧ ಉಲ್ಲೇಖದ ಸುತ್ತೋಲೆಯಲ್ಲಿ ದಿನಾಂಕ: 08.12.1976 ನಂತರ ಭೂ ಪರಿವರ್ತನೆಯಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ವಿನ್ಯಾಸ ನಕ್ಷೆಯನ್ನು ಅನುಮೋದನೆ ಪಡೆಯದೇ ಸ್ಥಳೀಯ ಸಂಸ್ಥೆಗಳಲ್ಲಿ ಖಾತೆ ತೆರೆದಿರುವಂತಹ ನಿವೇಶನಗಳಿಗೆ ಕಟ್ಟಡ ನಿರ್ಮಾಣ ಮಾಡುವ ಸಂಬಂಧ ತಾಂತ್ರಿಕ ಅನುಮೋದನೆ ನೀಡುವುದು ಸಮಂಜಸವಲ್ಲದ ಕಾರಣ ಇಂತಹ ನಿವೇಶನಗಳಲ್ಲಿ ಕಟ್ಟಡ ಪರವಾನಿಗೆ ನೀಡಲು ತಾಂತ್ರಿಕ ಅಭಿಪ್ರಾಯ ನೀಡಬಾರದೆಂದು ಸೂಚಿಸಲಾಗಿದೆ ಮತ್ತು ಗ್ರಾಮ ಠಾಣಾ ವ್ಯಾಪ್ತಿಯಲ್ಲಿನ ನಿವೇಶನಗಳಿಗೆ ಹಾಗೂ ದಿನಾಂಕ:08.12.1976ರ ಪೂರ್ವದಲ್ಲಿ ಭೂ ಪರಿವರ್ತನೆಯಾಗದ ನಿವೇಶನಗಳಿಗೆ ಸ್ಥಳೀಯ ಸಂಸ್ಥೆಯಲ್ಲಿ ಖಾತೆ ತೆರೆದಿದ್ದರೆ, ನಿಯಮಾನುಸಾರ ಭೂ ಪರಿವರ್ತನೆ ಆದೇಶವನ್ನು ಕಂದಾಯ ಇಲಾಖೆಯಿಂದ ಪಡೆದುಕೊಂಡು ನಂತರ ಅಂತಹ ನಿವೇಶನಗಳಿಗೆ ಕಟ್ಟಡ ಪರವಾನಿಗೆ ನೀಡಲು ಅಭಿಪ್ರಾಯ ನೀಡಬಹುದೆಂದು ತಿಳಿಸಲಾಗಿದೆ ಎಂದು ಸುತ್ತೋಲೆಯ ಬಗ್ಗೆ ಸಭಾ ಅಭಿಪ್ರಾಯವನ್ನು ಕೋರಿದರು.

**ನಿರ್ಣಯ:–** ಮಡಿಕೇರಿ ನಗರವು ಬೆಟ್ಟ–ಗುಡ್ಡಗಳಿಂದ ಕೂಡಿದ್ದು, ಎಲ್ಲೂ ಸಮತಟ್ಟವಾದ ಜಮೀನು ಲಭ್ಯವಿಲ್ಲದ ಕಾರಣ ಪ್ರತಿಯೊಂದು ನಿವೇಶನವು ಭೂ ಪರಿವರ್ತನೆಯಾಗಿ, ವಿನ್ಯಾಸ ಅನುಮೋದನೆಯಾಗಿ ಸ್ಥಳೀಯ ಸಂಸ್ಥೆಯಲ್ಲಿ ಖಾತೆ ವರ್ಗಾವಣೆಯಾಗಿರುವುದು ಅತೀ ಕಡಿಮೆ ಇದ್ದು, ಇತ್ತೀಚಿಗೆ ಬೆರಳಣಿಕೆಯಷ್ಟು ಮಾತ್ರ ವಿನ್ಯಾಸ ಅನುಮೋದನೆಯಾಗಿರುವುದು ಕಂಡುಬರುತ್ತಿದೆ. ಪುರಸಭೆ ಎಂದು ಸರ್ಕಾರದಿಂದ ಘೋಷಣೆಯಾದ ನಂತರದಲ್ಲಿ ಪುರಸಭಾ ವ್ಯಾಪ್ತಿಯಲ್ಲಿ ಬರುವ ಭೂ ಪರಿವರ್ತನೆಯಾಗಿಲ್ಲದ/ವಿನ್ಯಾಸ ಅನುಮೋದನೆಯಾಗದ ಎಲ್ಲಾ ನಿವೇಶನಗಳಿಗೆ ನಗರಸಭೆಯಲ್ಲಿ ಖಾತೆ ಮಾಡಿರುವುದು ಶೇ. 90ರಷ್ಟು ಕಂಡುಬರುತ್ತಿದೆ.

ಹಾಲಿ ಉಲ್ಲೇಖದ ಸುತ್ತೋಲೆಯನ್ವಯ ಪ್ರತಿಯೊಂದು ನಿವೇಶನಗಳಿಗೂ ಭೂ ಪರಿವರ್ತನೆಯಾಗಿ ವಿನ್ಯಾಸ ಅನುಮೋದನೆಯಾಗಿದ್ದರೆ ಮಾತ್ರ ಕಟ್ಟಡ ನಿರ್ಮಿಸಲು ಅನುಮೋದನೆ ನೀಡುವುದು ತುಂಬಾ ಕಷ್ಟ ಸಾಧ್ಯವಾಗಿರುವುದರಿಂದ ಹಾಗೂ ಇದರಿಂದ ನಾಗರೀಕರಿಗೆ ಅನಾನುಕೂಲತೆಯಾಗಿ ವಸತಿ ಕಟ್ಟಡ ನಿರ್ಮಿಸಲು ಸಹ ಅಡಚಣೆಯಾಗುವುದನ್ನು ಪರಿಗಣಿಸಿ ಈಗಾಗಲೇ ನಗರಸಭೆಯಲ್ಲಿ ಖಾತೆಯಾಗಿ ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಬರುವ ನಿವೇಶನಗಳಿಗೆ ಭೂ ಪರಿವರ್ತನೆ/ವಿನ್ಯಾಸ ಅನುಮೋದನೆ ನೀಡುವುದು ಸಹ ಕಷ್ಟಸಾಧ್ಯವಾದ ವಿಷಯವಾಗಿರುವುದರಿಂದ ಸಾರ್ವಜನಿಕರ ಅನುಕೂಲತೆಯ ಹಿತದೃಷ್ಟಿಯಿಂದ ಉಲ್ಲೇಖದ ಪತ್ರವನ್ನು ರದ್ದುಪಡಿಸಲು ಕೋರಿ ಸರ್ಕಾರಕ್ಕೆ ಪತ್ರ ಬರೆಯುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಹಿ/–
(ಶ್ರೀ ಎ.ಸಿ.ದೇವಯ್ಯ)
ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ,
ಮಡಿಕೇರಿ.

ಸಹಿ/–
(ಶ್ರೀ ಅಶೋಕ್ ಕುಮಾರ್)
ಆಯುಕ್ತರು(ಪ್ರ),
ನಗರಾಭಿವೃದ್ಧಿ ಪ್ರಾಧಿಕಾರ,
ಮಡಿಕೇರಿ.